ವಚನಾಧಾರಿತ

ಇಷ್ಟಲಿಂಗ ಪೂಜಾ ವಿಧಾನ



ಸಂ: ಶ್ರೀ ಸಿದ್ಧರಾಮ ಸ್ವಾಮಿಗಳು



ಲಿಂ. ಅಥಣಿ ಮುರಘೇಂದ್ರ ಶಿವಯೋಗಿಗಳು

ಶ್ರೀ ಗುರು ಬಸವಲಿಂಗಾಯ ನಮಃ

ವಚನಾಧಾರಿತ

ಇಷ್ಟಲಿಂಗ ಪೂಜಾ ವಿಧಾನ

ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು
ರುದ್ರಾಕ್ಷಿಮಠ, ನಾಗನೂರ – ಬೆಳಗಾವಿ

ಪ್ರಕಾಶಕರು
ಶರಣ ಸಾಹಿತ್ಯ ಭಂಡಾರ
ಕುಮಾರೇಶ್ವರ ಪ್ರಸಾದ ನಿಲಯ ಕಾಂಪ್ಲೆಕ್ಸ
ಶಿವಬಸವನಗರ, ಬೆಳಗಾವಿ–೧೦

ISHTALINGA POOJA VIDHANA : (based on Vachanas) by His Holiness Sri Siddaram Swamiji of Naganur Rudraximath; Belgaum.
Published by : Veerashaiva Adhyayana Academy, Belgaum.

Copies : 2000

5.00 ರೂ. ಗಳು

Printed at :
Yarbal Offset Printers
D-79, K.S.S.I.D.C. Industrial Estate
Channamma Nagar, Belgaum.
✆ 440952, 441950
Fax : 441402

ಪ್ರಸ್ತಾವನೆ

ವೈಚಾರಿಕ ಮತ್ತು ವೈಜ್ಞಾನಿಕ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿರುವ ವೀರಶೈವ ಧರ್ಮಕ್ಕೆ ಮೂಲಾಧಾರ ಇಷ್ಟಲಿಂಗ. ಅದು ವೀರಶೈವ ಧರ್ಮದ ಪ್ರಾಣ ಸ್ವರೂಪ. ಲಿಂಗತತ್ವ ವಿರಹಿತ ವೀರಶೈವವನ್ನು ಕಲ್ಪಿಸಲು ಸಾಧ್ಯವೇ ಇಲ್ಲ. ಈ ಕಾರಣಕ್ಕಾಗಿಯೇ ವೀರಶೈವರಿಗೆ ಲಿಂಗಾಯತ, ಲಿಂಗವಂತ ಎಂಬ ಪರ್ಯಾಯ ಪದಗಳು ಬಳಕೆಯಲ್ಲಿವೆ. ಜಗತ್ತಿನ ವಿವಿಧ ಧರ್ಮಗಳಂತೆ ವೀರಶೈವ ಧರ್ಮದ ಗುರಿಯೂ ಆತ್ಯಂತಿಕ ದುಃಖ ನಿವೃತ್ತಿ ಹಾಗು ಮಾನವಕಲ್ಯಾಣ. ಅಂದರೆ ಮನುಷ್ಯ ತಾನು ಬದುಕಿರುವಷ್ಟು ದಿನ ಸುಖ ಶಾಂತಿಯಿಂದ ಬದುಕಬೇಕು. ತನ್ನ ನಡೆನುಡಿಗಳಿಂದ ತನ್ನ ಜೀವನವನ್ನು ಉದಾತ್ತೀಕರಿಸಿಕೊಳ್ಳಬೇಕು. ಮಾನವತೆಯಿಂದ ದೇವತ್ವವನ್ನು ಸಾಧಿಸಬೇಕು ಎಂಬುದೇ ಆಗಿದೆ.

ಮಾನವ ದೇವನಾಗುವ, ಜೀವ ಶಿವನಾಗುವ, ನರ ಹರನಾಗುವ ಈ ಕ್ರಿಯೆಗೆ ಯೋಗ, ಶಿವಯೋಗ, ಲಿಂಗಾಂಗಯೋಗ ಎಂದು ಹೆಸರು. ಲಿಂಗಾಂಗ ಯೋಗದಲ್ಲಿ ಉಂಟಾಗುವ ಸುಖ (ಲಿಂಗಾಂಗಸಾಮರಸ್ಯ ಸುಖ) ಅನುಭವವೇದ್ಯವಾದುದು ಮಾತ್ರ. ಈ ಸುಖ ಪಡೆದವನಿಗೆ ಎಂದೂ ದುಃಖ ಬಾರದು. ಅದು ಶ್ರೇಷ್ಠ ಸುಖ; ಪರಮ ಸುಖ.

ಲಿಂಗ ಸ್ವರೂಪ :

ವೀರಶೈವ ಧರ್ಮದಲ್ಲಿ ಉಕ್ತವಾಗಿರುವ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು ಲಿಂಗಾಂಗ ಸಾಮರಸ್ಯ ಸುಖ ಪಡೆವ ಸಾಧನಗಳೇ ಆಗಿವೆ. ಅಷ್ಟಾವರಣದಿಂದ ಅಂಗಶುದ್ಧಿ,

ಪಂಚಾಚಾರದಿಂದ ಪ್ರಾಣ (ಮನ) ಶುದ್ಧಿ, ಷಟ್‌ಸ್ಥಲದಿಂದ ಆತ್ಮ ಶುದ್ಧಿಯಾಗಿ ಲಿಂಗಾಂಗ ಸಾಮರಸ್ಯ ಸುಖಕ್ಕೆ ಕಾರಣವಾಗುತ್ತದೆ. ಅಷ್ಟಾವರಣ (ಅಷ್ಟ–ಆವರಣ)ಗಳಲ್ಲಿ 'ಲಿಂಗ' ಎರಡನೆಯದಾದರೂ ವೀರಶೈವ ಪ್ರಾಣ ಸ್ವರೂಪವಾದುದರಿಂದ ಅದಕ್ಕೆ ವಿಶಿಷ್ಟವಾದ ಮಹತ್ವವಿದೆ. ನಮ್ಮ ಶರಣರು ಪರಾತ್ಪರ ವಸ್ತುವಿಗೆ 'ಲಿಂಗ' ವೆಂದು ಕರೆದಿದ್ದಾರೆ. ಉರಿಲಿಂಗ ಪೆದ್ದಿ' ಎಂಬ ಶರಣ ಲಿಂಗವನ್ನು ಕುರಿತು– ''**ಲಿಂಗವೆಂಬುದು ಪರಶಿವನ ನಿಜದೇಹ, ಲಿಂಗವೆಂಬುದು ಪರ ಶಿವನ ಘನತೇಜ**'' ಎಂದು ಹೇಳಿದರೆ, ಸ್ವತಂತ್ರ ಸಿದ್ಧಲಿಂಗೇಶ್ವರರು ''**ಲಿಂಗವೆಂಬುದು ಸರ್ವಕಾರಣ ನಿರ್ಮಲ, ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ, ಲಿಂಗವೆಂಬುದು ಸರ್ವಲೋಕೋತ್ಪತ್ತಿಗೆ ಕಾರಣ**'' ಎಂದುದಲ್ಲದೆ ಅದು ಭವ (ಸಂಸಾರ) ಸಾಗರವನ್ನು ದಾಟಿಸುವ ನಾವೆ ಎಂದು ಹೇಳಿದ್ದಾರೆ. ಮೊಗ್ಗೆಯ ಮಾಯಿದೇವರು ''ತೋರುವ ಸಚರಾಚರ ಸೃಷ್ಟಿ ಯಾವುದರಲ್ಲಿ ಹುಟ್ಟಿ, ಬೆಳೆದು ಕೊನೆಗೆ ಯಾವುದರಲ್ಲಿ ಲಯವಾಗುವದೋ ಅದು ಲಿಂಗ[೧]'' ಎಂದು ಲಿಂಗದ ಸರ್ವ ವ್ಯಾಪಕತ್ವವನ್ನು ಶ್ರುತಪಡಿಸಿದ್ದಾರೆ.

ಅದು ಅಣುವಿಂಗೆ ಅಣು, ಮಹತ್ತಿಗೆ ಮಹತ್ತು ಎಂದೂ, ಉಪಮಾತೀತವಾದ ಲಿಂಗ ಮಾತಿಗೆ ನಿಲುಕದ, ಕಲ್ಪನೆಗೆ ಮೀರಿದ, ಭಾವಭರಿತ, ಜ್ಞಾನಗೋಚರವಾದ ಪರಾತ್ಪರ ವಸ್ತುವೆಂದು ನಮ್ಮ ಶರಣರು ಬಣ್ಣಿಸಿದ್ದಾರೆ. ಸಕಲ ತತ್ವಗಳನ್ನು, ಸಮಸ್ತ ವಿಶ್ವವನ್ನು ಸಂಪೂರ್ಣವಾಗಿ ತನ್ನೊಳಗೆ ತುಂಬಿಕೊಂಡಿರುವ ಅದು ನಿಜವಸ್ತು. ಆಲದ ಮರದ ಒಂದು ಬೀಜ ತನ್ನಲ್ಲಿ ಇಡೀ ವೃಕ್ಷ ವಿಸ್ತಾರವನ್ನೆಲ್ಲ ಗರ್ಭೀಕರಿಸಿಕೊಂಡಂತೆ ಕೋಟಿ ಕೋಟಿ ಬ್ರಹ್ಮಾಂಡಗಳನ್ನು ತನ್ನಲ್ಲಿ ತುಂಬಿಕೊಂಡಿರುವ ಪರಬ್ರಹ್ಮ. ''**ಮೃತ್ಕಾಷ್ಟ ಪಾಷಾಣ–**

---

೧. ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ।
ತದೇತತ್ ಲಿಂಗಮಿತ್ಯುಕ್ತಂ ಲಿಂಗತತ್ವ ಪರಾಯಣ್ಯೆ :॥

ಗಳಿಂದಾದುವೆಲ್ಲ ಲಿಂಗವೆ?'' ಎಂದು ಕೇಳುವ ಶರಣರು ಸ್ಥೂಲ, ಸೂಕ್ಷ್ಮಗಳ ಆಚೆಗಿರುವ ಜ್ಞಾನರೂಪವೇ ಲಿಂಗ ಎಂದಿದ್ದಾರೆ. ಅದು ಪರಂಜ್ಯೋತಿ ಸ್ವರೂಪ ಎಂಬುದು ಶರಣರ ಅನುಭವ. ವೀರಶೈವರಿಗೆ ಈ ವಿಷಯದಲ್ಲಿ ಅಚಲ ಶ್ರದ್ಧೆ ಇರಬೇಕು. ಏಕೆಂದರೆ ವೀರಶೈವ ಧರ್ಮಕ್ಕೆ ವೇದಾಗಮಗಳು ಪ್ರಮಾಣಗಳಲ್ಲ. ಬಸವಾದಿ ಶರಣರ–ಶರಣೆಯರ ಅನುಭವವೇ ಪ್ರಮಾಣ. ವೀರಶೈವರು ದೇಹದ ಮೇಲೆ ಧರಿಸುವ ಲಿಂಗ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾಗಿರುವ ಪರಶಿವ ಅಥವಾ ಪರಾತ್ಪರ ವಸ್ತುವೇ ವಿನಃ ಅದು ಪೌರಾಣಿಕವಾದ ಕಲ್ಪನೆಯಲ್ಲಿರುವ ಕೈಲಾಸದ ಪಾರ್ವತಿಯ ಪತಿಯಾದ ಶಿವನ ಪ್ರತೀಕವಲ್ಲ. ಇದನ್ನೇ ನಮ್ಮ ಶರಣರು ಇಷ್ಟಲಿಂಗವೆಂದು ಕರೆದಿದ್ದಾರೆ.

ಇಷ್ಟಲಿಂಗ ಸಾಕಾರವೂ ಹೌದು, ನಿರಾಕಾರವೂ ಹೌದು

ಇಷ್ಟಲಿಂಗಕ್ಕೆ ಕರಚರಣಾದಿ ಆಕಾರವಿಲ್ಲದುದರಿಂದ ಅದು ನಿರಾಕಾರ ಸ್ವರೂಪದ ಪ್ರಾಣಲಿಂಗವೇ ಹೊರತು ಯಾವುದೋ ಒಂದು ಮೂರ್ತಿ ಅಥವಾ ಪ್ರತಿಮೆಯಲ್ಲ. ಇಂತಹ ಪರಾತ್ಪರ ನಿರ್ಗುಣ, ನಿರಾಕಾರ – ಸಾಕಾರ ಸ್ವರೂಪವಾದ[೧] ಪರಶಿವನನ್ನು ಎದೆಯಲ್ಲಿ ಧರಿಸಿ, ಸ್ಮರಿಸಿ ಸದಾ ಶಿವಯೋಗದಲ್ಲಿರುವ ಜಗತ್ತಿನ ಏಕೈಕ ಧರ್ಮೀಯರು ವೀರಶೈವರು ಮಾತ್ರ ಎಂಬುದು ಗಮನಾರ್ಹ. ಇಷ್ಟಲಿಂಗ ಸಾಕಾರವಾಗಿದ್ದರೂ ನಿರಾಕಾರ. ಅದು ಕುರುಹು ಮಾತ್ರ. ಅರುಹು ಪಡೆಯಲು ಕುರುಹು ಬೇಕು. ನಿರಾಕಾರವಾದ ಸಮಯವನ್ನು ತಿಳಿಯಲು ಸಾಕಾರದಲ್ಲಿರುವ ಗಡಿಯಾರ ಬೇಡವೆ? ಆದ್ದರಿಂದ ಕುರುಹಿನ ಮೂಲಕವೇ

---

೧. ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲಸಂಗಮದೇವ

– ಬಸವಣ್ಣ.

ಪರಮಾತ್ಮನಿಗೆ ಪೂಜೆ ಸಲ್ಲಬೇಕು. ಆಕಾರವಿಡಿದು ಅರ್ಚನೆ ಪೂಜೆಯ ಮಾಡಬೇಕೆಂಬುದು ಶರಣ ಉರಿಲಿಂಗ ಪೆದ್ದಿಗಳ ಸ್ಪಷ್ಟ ಆದೇಶ.

ಇಷ್ಟಲಿಂಗ ಸ್ಥಾವರ ಮೂರ್ತಿ ಅಲ್ಲ

ಲಿಂಗ ಸಾಕಾರವೆಂದಾಕ್ಷಣ ಸ್ಥಾವರವೆಂದು ಅರ್ಥವಲ್ಲ. ''ಅಂಗದ ಮೇಲಣ ಲಿಂಗವ ಹಿಂಗಿ ಸ್ಥಾವರಲಿಂಗಕ್ಕೆರಗುವ ಭಂಗಿತರ ಮುಖವ ನೋಡಲಾಗದು'' ಎಂಬ ಅಲ್ಲಮಪ್ರಭುವಿನ ವಚನ ಮತ್ತು ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟೆಯಡಿಯಾಗಿ ಬೀಳುವ ಲೊಟ್ಟೆ ಮೂಳರ ಕಂಡರೆ..... ಎಂಬ ಶರಣ ಚೌಡಯ್ಯನ ವಚನ ಇಷ್ಟಲಿಂಗ ಸ್ಥಾವರಗಳಿಂದ ಭಿನ್ನ ಎಂಬುದನ್ನು ಸ್ಪಷ್ಟಪಡಿಸುತ್ತದೆ. ವೀರಶೈವರು ಮೂರ್ತಿ ಪೂಜಕರಲ್ಲ, ಮೂರ್ತಿಗಳು ಸ್ಥಾವರ. ಇಷ್ಟಲಿಂಗ ಚೈತನ್ಯಶೀಲ, ಚಿತ್ಕಳೆ. ಅದು ಸ್ಥಾವರವಲ್ಲ. ಸ್ಥಾವರಕ್ಕಳಿವುಂಟು ಎಂದು ಹೇಳಿದ ಬಸವಣ್ಣನವರು– ಅರಗು ತಿಂದು ಕರಗುವ ದೈವವ, ಉರಿಯ ಕಂಡು ಮುರುಟುವ ದೈವವ, ಅವಸರ ಬಂದರೆ ಮಾರುವ ದೈವವ, ಅಂಜಿಕೆಯಾದಡೆ ಹೂಳುವ ದೈವವ ಇಷ್ಟಲಿಂಗಕ್ಕೆ ಎಂತು ಸರಿ ಎಂಬೆನಯ್ಯ? ಎಂದು ಪ್ರಶ್ನಿಸುತ್ತಾರೆ. ಇದರಿಂದಲಿಂಗತತ್ವದ ವಿಶಿಷ್ಟತೆಯ ಅರಿವಾಗದೇ ಇರದು.

ಪ್ರಾಣಲಿಂಗ ಭಾವಲಿಂಗಗಳ ಅನುಸಂಧಾನ :

ಅಷ್ಟಾವರಣಾಂತರ್ಗತ 'ಲಿಂಗತತ್ವ'ವನ್ನು ಸ್ಥೂಲವಾಗಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವೆಂದು ವಿಂಗಡಿಸಬಹುದು. ಸ್ಥೂಲ ಶರೀರದ ಮೇಲೆ ಧರಿಸುವ ಲಿಂಗ ಇಷ್ಟಲಿಂಗ, ಹೃದಯಕಮಲದಲ್ಲಿ ಯಾವುದು ಸದ್ಭಾವ ಗೋಚರವಾಗುವುದೋ ಅದು ಪ್ರಾಣಲಿಂಗ, ಪರಾತ್ಪರ– ವೆನಿಸಿಕೊಂಡಿರುವುದು ಭಾವಲಿಂಗ. ಅಷ್ಟವಿಧಾರ್ಚನೆಯಿಂದ

ಮಾಡುವದು ಇಷ್ಟಲಿಂಗ ಪೂಜೆ. ಆ ಲಿಂಗವ ಮನಸ್ಸಿನಲ್ಲಿ ಧ್ಯಾನಿಸಿ, ಆ ಮನೋಮಧ್ಯದಲ್ಲಿಪ್ಪ ನಿಷ್ಕಲ ಬ್ರಹ್ಮಮಯ ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಕರಸ್ಥಲದಲ್ಲಿರ್ಪ ಲಿಂಗದ ಹೊತ್ತಿನಲ್ಲಿ ಕಟ್ಟಿ ನೆರವುದೀಗ ಪ್ರಾಣ ಲಿಂಗದ ಪೂಜೆ, ಮನಸ್ಸು ಲಿಂಗದಲ್ಲಿ ತಲ್ಲೀನವಾಗಿ ನಚ್ಚಿಮೆಚ್ಚಿ ಅಚ್ಚೊತ್ತಿ ಅಗಲದಿರ್ಪುದೇ ಭಾವಲಿಂಗಪೂಜೆ. ಇಷ್ಟಲಿಂಗದ ಬಾಹ್ಯ ಕ್ರಿಯಾಚರಣೆಯಿಲ್ಲದೆ ಪ್ರಾಣಲಿಂಗದ ಅನುಸಂಧಾನಜನ್ಯ ಸುಖವನ್ನು ಅನುಭವಿಸು- ವೆನೆಂಬುದು ಕನಸಿನ ಮಾತು. ಪ್ರಾಣಲಿಂಗ–ಭಾವಲಿಂಗಗಳ ಅನುಸಂಧಾನಕ್ಕೆ ಶರೀರದ ಮೇಲೆ ಲಿಂಗಧಾರಣ ಮಾಡಿಕೊಳ್ಳುವುದು ಅತ್ಯವಶ್ಯ. ಈ ಕ್ರಿಯೆಗೆ 'ಇಷ್ಟಲಿಂಗದೀಕ್ಷೆ' ಎಂದು ಹೆಸರು.

ಇಷ್ಟಲಿಂಗ ದೀಕ್ಷೆ :

ವೀರಶೈವರಲ್ಲಿ ''ಇಷ್ಟಲಿಂಗ ದೀಕ್ಷೆ'' ಒಂದು ವಿಶಿಷ್ಟವಾದ ಸಂಸ್ಕಾರ ಈ ಸಂಸ್ಕಾರವನ್ನು ನೆರವೇರಿಸುವವನು ಶ್ರೀಗುರು. ದೀಕ್ಷೆಗಳಲ್ಲಿಯೂ ಮೂರು ವಿಧ. ಪರಶಿವ ತತ್ವವನ್ನು ತಿಳಿದ, ಸದ್ಗುಣ ಸಂಪನ್ನನಾದ ಶ್ರೀಗುರು ವೇಧಾದೀಕ್ಷೆಯಲ್ಲಿ – ತನ್ನ ಪವಿತ್ರವಾದ ಹಸ್ತವನ್ನು ಶಿಷ್ಯನ ಮಸ್ತಕದ ಮೇಲಿರಿಸಿ ಅವನ 'ಕಾರಣ' ಶರೀರದಲ್ಲಿರುವ ದೋಷವನ್ನು ಕಳೆದು ಭಾವಲಿಂಗವನ್ನು, ಮಂತ್ರದೀಕ್ಷೆಯಲ್ಲಿ ಶಿಷ್ಯನ ಬಲಗಿವಿಯಲ್ಲಿ ಪ್ರಣವಸಹಿತ ಪಂಚಾಕ್ಷರಿ (ಷಡಕ್ಷರ) ಮಂತ್ರವನ್ನು ಉಪದೇಶಿಸುವುದರ ಮೂಲಕ ಸೂಕ್ಷ್ಮ ಶರೀರದಲ್ಲಿರುವ ದೋಷ ನಿವಾರಣೆ ಮಾಡಿ ಅಲ್ಲಿ ಪ್ರಾಣಲಿಂಗವನ್ನು ನೆಲೆಗೊಳಿಸುತ್ತಾನೆ. ಮೂರನೆಯದಾದ ಕ್ರಿಯಾದೀಕ್ಷೆಯ ಮುಖಾಂತರ ಶಿಷ್ಯನ ಸ್ಥೂಲ ಶರೀರದಲ್ಲಿರುವ ದೋಷವನತಿಗಳೆದು ಅವನ ಕರಸ್ಥಲಕ್ಕೆ ಇಷ್ಟಲಿಂಗವನ್ನು ದಯಪಾಲಿಸುತ್ತಾನೆ. ಹೀಗೆ ತನುತ್ರಯದಲ್ಲಿರುವ ಮಲತ್ರಯಗಳನ್ನು ನಿವಾರಿಸಿ ಲಿಂಗತ್ರಯವನ್ನು ನೆಲೆಗೊಳಿಸುವ ವೀರಶೈವರ ಈ ದೀಕ್ಷಾ ಸಂಸ್ಕಾರ ಮಗ್ಗೆಯ ಮಾಯಿದೇವನ

ದೃಷ್ಟಿಯಲ್ಲಿ 'ದೃಷ್ಟಿಯೋಗ'. ಅದು ಭವದಿಂದ ಮುಕ್ತಿಯನ್ನುಂಟು ಮಾಡುವಂತಹದು. ಶಿಷ್ಯನ ಹೃದಯಾಕಾಶದಲ್ಲಿರುವ ಚೈತನ್ಯಮಯ ಚಿತ್ಕಳೆಯೆ ಗುರುಮುಖದಿಂದ ಲಿಂಗದಲ್ಲಿ ಸ್ಥಾಪಿತವಾಗಿರುವುದು. ಉಪಾಸಕರ ಅನಿಷ್ಟವನ್ನು ಪರಿಹರಿಸಿ ಇಷ್ಟಾರ್ಥವನ್ನು ದಯಪಾಲಿಸುವ ಇಷ್ಟಲಿಂಗವನ್ನು ಭಕ್ತಿಯಿಂದ ಉಪಾಸನೆ ಮಾಡುವುದು ಪ್ರತಿಯೊಬ್ಬ ವೀರಶೈವನ ಕರ್ತವ್ಯ.

ಇಷ್ಟಲಿಂಗೋಪಾಸನೆ : (ಇಷ್ಟಲಿಂಗ + ಉಪಾಸನೆ)

ಸ್ವಸ್ವರೂಪಾನುಚಿಂತನೆ ಅಥವಾ ಆತ್ಮಾನುಚಿಂತನೆಗೆ ಉಪಾಸನೆ ಎಂದು ಹೆಸರು. ತನ್ನ ಆತ್ಮವು ಇಷ್ಟಲಿಂಗದ ರೂಪದಲ್ಲಿದೆಯೆಂದು ಪರಿಭಾವಿಸಿ ಅದರ ಅನುಚಿಂತನೆಯಲ್ಲಿ-ರುವುದೇ ಇಷ್ಟಲಿಂಗೋಪಾಸನೆ ಎನಿಸುವುದು. ಇದರಲ್ಲಿ ಅರ್ಚನ, ಅರ್ಪಣ, ಅನುಭಾವ ಎಂದು ಮೂರು ಮುಖ್ಯ ಸಾಧನಗಳಿದ್ದು, ಪ್ರತಿಯೊಬ್ಬ ವೀರಶೈವನು ಈ ಸಾಧನಗಳನ್ನು ಅರಿತು ಆಚರಿಸಬೇಕು. ಇವುಗಳಲ್ಲಿ ಮೊದಲನೆಯದು ಅರ್ಚನೆ.

ಅರ್ಚನೆ ಎಂದರೆ ಜೀವಾತ್ಮನು ಸಚ್ಚಿದಾನಂದ ಸ್ವರೂಪಿಯಾದ ಪರಮಾತ್ಮನನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸುವುದು. ಈ ಅರ್ಚನೆಯೂ ಉಪಚಾರ, ಮಂತ್ರಜಪ ಹಾಗು ಧ್ಯಾನವೆಂಬ ಮೂರು ಭಾಗಗಳಿಂದ ಕೂಡಿದ್ದು, ಜಲ, ಭಸ್ಮ ಗಂಧ, ಧೂಪ, ದೀಪ, ಪತ್ರಿ, ಪುಷ್ಪ, ನೈವೇದ್ಯಗಳೆಂಬ ಎಂಟು ವಿಧ ಪದಾರ್ಥಗಳಿಂದ ಪೂಜಿಸುವುದು ಅಷ್ಟವಿಧಾರ್ಚನೆ. ಅರ್ಘ್ಯ ಪಾದ್ಯಾದಿ ಹದಿನಾರು ಪದಾರ್ಥಗಳಿಂದ ಇಷ್ಟಲಿಂಗವನ್ನು ಪೂಜಿಸಿ ಉಪಚರಿಸುವುದು ಷೋಡಶೋಪಚಾರ ಪೂಜೆ. ಈ ರೀತಿಯ ಪದಾರ್ಥಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಿ ಪೂಜಿಸುವಾಗ ಸಾಂದರ್ಭಿಕವಾಗಿ ಸಂಸ್ಕೃತದಲ್ಲಿ ರಚಿತವಾದ ಶ್ಲೋಕಗಳನ್ನು ಹೇಳಿಕೊಂಡು ಬಂದಿರುವುದು ವಾಡಿಕೆ. ಆದರೆ ಸಂಸ್ಕೃತ ಭಾಷಾ

ಜ್ಞಾನವಿಲ್ಲದವರು ಆ ಭಾಷೆಯ ಶ್ಲೋಕಗಳನ್ನು ತಪ್ಪು ತಪ್ಪಾಗಿ ಉಚ್ಚರಿಸುವುದಕ್ಕಿಂತಲೂ ಬಸವಾದಿ ಪ್ರಮಥರ ವಚನಗಳನ್ನು ಹೇಳುತ್ತ ಇಷ್ಟಲಿಂಗಾರ್ಚನೆ ಮಾಡುವುದೇ ಸೂಕ್ತ. ಹೀಗೆ ವಚನಗಳನ್ನು ಹೇಳುವಾಗ ಅವುಗಳ ಅರ್ಥವೂ ನಮ್ಮರಿವಿಗೆ ಬಂದು ಆನಂದಾನುಭೂತಿಯುಂಟಾಗುವುದು. ಇಂಥ ವಚನಗಳೂ ಗೊತ್ತಿಲ್ಲದ ಸಂದರ್ಭದಲ್ಲಿ ಗುರುಗಳಿಂದ ಉಪದೇಶಿಸಲ್ಪಟ್ಟ ಮಹಾಮಂತ್ರವನ್ನು (ಓಂ ನಮಃ ಶಿವಾಯ) ಪೂಜೋಪಚಾರಗಳಲ್ಲಿ ಉಪಯೋಗಿಸಬಹುದು. (''ಅನೇನ ಮೂಲಮಂತ್ರೇಣ ಶಿವಲಿಂಗಂ ಪ್ರಪೂಜಯೇತ''). ಅಷ್ಟವಿಧಾರ್ಚನೆ, ಷೋಡಶೋಪಚಾರಗಳಲ್ಲಿ ಉಕ್ತವಾದ ಎಲ್ಲ ಪೂಜಾಪರಿಕರಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಲಭ್ಯವಿರುವ ಪರಿಕರ (ವಸ್ತು)ಗಳಿಂದ ಪೂಜೆ ಸಲ್ಲಿಸಿದರೂ ಸಾಕು. ಪೂಜೆಯಲ್ಲಿ ಪೂಜಾಪರಿಕರಗಳು ಮುಖ್ಯವಲ್ಲ ಪೂಜಿಸುವವರ ಭಕ್ತಿಭಾವವೇ ಬಹುಮುಖ್ಯವಾದುದು. ಅಷ್ಟವಿಧಾರ್ಚನೆ ಅಥವಾ ಷೋಡಶೋಪಚಾರ ಪೂಜೆಯ ನಂತರ ಮಂತ್ರಜಪ ಅಂದರೆ ಗುರುಗಳು ಉಪದೇಶಿಸಿದ ಮಹಾಮಂತ್ರವನ್ನು (ಓಂ ನಮಃ ಶಿವಾಯ) ಜಪಿಸುವುದು ಎರಡನೆಯ ಭಾಗ. ಇಂತಿಷ್ಟೇ ಮಂತ್ರಗಳನ್ನು ಜಪಿಸಬೇಕೆಂಬ ನಿಯಮವೇನೂ ಇಲ್ಲವಾದರೂ ಹೆಚ್ಚು ಹೆಚ್ಚು ಸಮಯ ಮಂತ್ರಜಪ ಮುಂದುವರೆಸಿದಂತೆ ಮೂರನೆಯದಾದ ಧ್ಯಾನದ ಸಿದ್ಧಿ ಲಭಿಸುವುದು. ಪೂಜೋಪಚಾರ ಮತ್ತು ಮಂತ್ರಜಪ ಇವು ಧ್ಯಾನಸಿದ್ಧಿಯ ಸಾಧನಗಳು. ''ಧ್ಯಾನಮದಿಷ್ಟ ಲಿಂಗ ಮಹರ್ನಿಶಮುಂ ನೆನೆವೇಕ ನಿಷ್ಠೆ'' ಅಂದರೆ ಇಷ್ಟಲಿಂಗವನ್ನು ಧ್ಯಾನಿಸುವಾಗ ಇಷ್ಟಲಿಂಗದಲ್ಲಿ ಅನಿಮಿಷ ದೃಷ್ಟಿ ಇರಬೇಕು. ಇದೇ ದೃಷ್ಟಿಯೋಗವೆನಿಸುವುದು.

ಅನಿಮಿಷ ದೃಷ್ಟಿ = ದೃಷ್ಟಿ ಚಲಿಸದಂತೆ ಇರಿಸುವುದು.

ದೃಷ್ಟಿಯೋಗದಿಂದ ಮನಸ್ಸು ಏಕಾಗ್ರವಾಗಿ ಲಿಂಗದ ನೆನಹಿನಲ್ಲಿ ನೆಲೆಸುವುದು. ಈ ನೆನಹಿನಿಂದ ಲಿಂಗಕಳೆ, ಲಿಂಗಗುಣಗಳು ಪೂಜಿಸುವವರಲ್ಲಿ ನಲೆಗೊಳ್ಳುವವು. ಇದರಿಂದ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣನಾದ ಪರಶಿವನನ್ನು ಪೂಜಿಸುತ್ತ ಪೂಜಕನು ಕೂಡ ತತ್ಸ್ವರೂಪನಾಗಲು ಸಹಾಯಕವಾಗುವುದು.

ಇಷ್ಟಲಿಂಗೋಪಾಸನೆಯ ಎರಡನೆಯ ಸಾಧನವೇ ಅರ್ಪಣ. ಇಷ್ಟಲಿಂಗಾರ್ಚನೆಯ ನಂತರ ಉಪಾಸಕನು ಯಾವ ಫಲವನ್ನೂ ಅಪೇಕ್ಷಿಸದೆ ಲಿಂಗಕಾರ್ಯಕ್ಕೋಸ್ಕರ ಕ್ರಿಯೆಗಳನ್ನು ಮಾಡುತ್ತ ತಾನು ಅನುಭವಿಸುವುದೆಲ್ಲವೂ ಪರಮಾತ್ಮನದೆಂದು ಭಾವಿಸಿ ಮಾಡುವುದು ಅರ್ಪಣವೆನಿಸುವುದು. ಮನುಷ್ಯನಲ್ಲಿರುವ ಅಂಗ, ಮನ, ಭಾವಗಳು ಈ ಅರ್ಪಣದಿಂದ ಪರಿಶುದ್ಧವಾಗುತ್ತವೆ. ಹಾಗೆಯೇ ಪದಾರ್ಥ ಸೇವನೆಯಲ್ಲಿ ರೂಪು, ರುಚಿ, ತೃಪ್ತಿಗಳನ್ನು ಇಷ್ಟ, ಪ್ರಾಣ, ಭಾವಲಿಂಗಗಳಿಗೆ ಅರ್ಪಿಸಿದಾಗ ಅಂಗ ಮನ ಭಾವಗಳು ಪರಿಶುದ್ಧವಾಗಿ ಲಿಂಗದಲ್ಲಿ ಲೀನವಾಗಿ ಲಿಂಗಾಂಗ ಸಾಮರಸ್ಯ ಸುಖವು ಲಭ್ಯವಾಗುವುದು.

ಅನುಭಾವ ಇಷ್ಟಲಿಂಗೋಪಾಸನೆಯ ಕೊನೆಯ ಹಾಗು ಮೂರನೆಯ ಹಂತ. ಬಸವಾದಿ ಶರಣರು ಆಚರಿಸಿ ನುಡಿದ ವಚನಗಳನ್ನು ಓದಿ ಅರಿಯಬೇಕು; ಅರಿತು ಆಚರಿಸಬೇಕು. ಹೀಗೆ ಆಚರಿಸುವಲ್ಲಿ ತನಗುಂಟಾದ ಅನುಭವವನ್ನು ಇತರರಿಗೆ ಹೇಳಬೇಕು. ಹಾಗೆಯೇ ಬಲ್ಲವರೊಡನೆ ಚರ್ಚಿಸಬೇಕು. ತನ್ನನ್ನು ತಾನು ಅರಿತುಕೊಳ್ಳಲು, ತನ್ನ ಸ್ವರೂಪ ಜ್ಞಾನ ಮಾಡಿಕೊಳ್ಳಲು ಶಿವಜ್ಞಾನಿಗಳೊಂದಿಗೆ ನಡೆಸುವ ಇಂತಹ ಚರ್ಚೆಗಳಿಗೆ ಅನುಭವ, ಶಿವಾನುಭವ ಅಥವಾ 'ಅನುಭಾವ' ಎಂದು ಕರೆಯುವರು. ಮನುಷ್ಯನ ಭಕ್ತಿಕ್ರಿಯಾಚರಣೆಗೆ ಈ ಅನುಭವವೇ ಆಧಾರವಾಗಿದೆ. 'ಮನದ ಮೈಲಿಗೆ ತೊಳೆಯಬೇಕಾದರೆ ಕೂಡಲಚೆನ್ನಸಂಗನ ಶರಣರ

ಅನುಭಾವವ ಮಾಡುವುದು' ಎಂಬ ಮಹಾಜ್ಞಾನಿ ಚನ್ನಬಸವಣ್ಣನ ವಚನದಿಂದ ಮನಸ್ಸಿನ ಪರಿಶುದ್ಧತೆಗೆ ಅನುಭಾವವೇ ಮುಖ್ಯ ಎಂಬುದು ಸ್ಪಷ್ಟವಾಗುತ್ತದೆ.

ಈ ರೀತಿ ಪ್ರತಿಯೊಬ್ಬ ವೀರಶೈವನು ಇಷ್ಟಲಿಂಗೋಪಾಸನೆಯಲ್ಲಿ ಅರ್ಚನ, ಅರ್ಪಣ, ಅನುಭಾವಗಳನ್ನು ಅರಿತು ಆಚರಿಸಬೇಕು. ಇದರಿಂದ ಇಷ್ಟಲಿಂಗೋಪಾಸನೆಯು ಪರಿಪೂರ್ಣಗೊಂಡು ಉಪಾಸಕನು ಇಷ್ಟಾರ್ಥ ಸಿದ್ಧಿ ಪಡೆದು ನಿತ್ಯಪರಿಪೂರ್ಣ ಪರವಸ್ತುವಿನಲ್ಲಿ ಬೆರೆಸಿ ಬೇರಿಲ್ಲದಂತೆ ಒಂದಾಗುವನು. ಅಣ್ಣ ಬಸವಣ್ಣ ಇದನ್ನೇ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ.

ಅಷ್ಟ ವಿಧಾರ್ಚನೆಯ ಮಾಡುವುದು
ಮಾಡಿದ ಪೂಜೆಯ ನೋಡುವುದು
ಶಿವತತ್ವ ಗೀತವ ಹಾಡುವುದು
ಶಿವನ ಮುಂದೆ ನಲಿದಾಡುವುದು
ಭಕ್ತಿ ಸಂಭಾಷಣೆಯ ಮಾಡುವುದು
ನಮ್ಮ ಕೂಡಲಸಂಗನ ಕೂಡುವುದು.

ಇಷ್ಟಲಿಂಗ ಪೂಜಕನಿಗೆ ತನ್ನ ಪೂಜಾನುಸಂಧಾನ ಕಾಲದಲ್ಲಿ ಸಕಲ ಬ್ರಹ್ಮಾಂಡವೂ ಪರಮಾತ್ಮನ ಸ್ವರೂಪವೆಂಬ ಅನುಭವ ಉಂಟಾಗಿ ತನ್ಮಯನಾಗುವುದರಿಂದ ಪೂಜ್ಯ ಪೂಜಕ ಭಾವ ಅಳಿದು ಅವನು ವಿಶ್ವಾತ್ಮಕ ಸ್ವರೂಪವಾದ ಪರಿಪೂರ್ಣ ಸ್ಥಿತಿಯನ್ನು ಪಡೆಯುವನು.

ಲಿಂಗದಲಿ ಮನವಾಗಿ ಲಿಂಗದಲಿ ನೆನಹಾಗಿ
ಲಿಂಗದಲಿ ನೋಟ ನುಡಿಕೂಟವಾದವನು
ಲಿಂಗವೇ ಅಕ್ಕು ಸರ್ವಜ್ಞ.

ಎಂಬ ಸರ್ವಜ್ಞನ ವಚನದ ಭಾವವೂ ಇದನ್ನೆ ಸೂಚಿಸುತ್ತದೆ.

ವ್ಯಕ್ತಿ ಶಾರೀರಿಕವಾಗಿ ಮಾನವ ರೂಪದಲ್ಲಿದ್ದರೂ, ತಾತ್ವಿಕವಾಗಿ ಪರಮಾತ್ಮನ ಸ್ವರೂಪವನ್ನು ಹೊಂದುತ್ತಾನೆಂಬುದು ಲಿಂಗಾನುಭಾವಿಗಳಿಗೆ ಅನುಭವವೇದ್ಯವಾದ ಸಂಗತಿ. ''ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ ತಪ್ಪುವವು ಅಪಮೃತ್ಯು ಕಾಲ ಕರ್ಮಂಗಳಯ್ಯಾ'' ಮತ್ತು ''ಎನಗೆ ನಿಮ್ಮ ನೆನಹಾದಗಲೇ ಉದಯ'' ಎಂದು ಹೇಳಿದ ಬಸವಣ್ಣ ಇಷ್ಟಲಿಂಗಾರ್ಚನೆ ಹಾಗು ಇಷ್ಟಲಿಂಗಧ್ಯಾನದ ಮಹತ್ವವನ್ನು ಅರಿತುಕೊಳ್ಳಲು ಮತ್ತು ಸದಾ ಇಷ್ಟಲಿಂಗಧಾರಿಗಳಾಗಿ ಇಷ್ಟಲಿಂಗೋಪಾಸನೆಯ ಮೂಲಕ ಹುಟ್ಟುಸಾವುಗಳೆಂಬ ಭವಚಕ್ರದಿಂದ ಮುಕ್ತರಾಗಿ ನಿತ್ಯ ಸುಖಿಗಳಾಗಲು ಸಂದೇಶ ನೀಡಿದ್ದಾನೆ.

ಸಮಾರೋಪ :

ಆದ್ದರಿಂದ ಪ್ರತಿಯೊಬ್ಬ ವೀರಶೈವನು ವಿಶಿಷ್ಟವಾದ 'ಲಿಂಗತತ್ವ'ವನ್ನು ಅರಿತು ಆಚರಿಸಬೇಕು. ''ಲಿಂಗವನರಿಯದೆ ಏನರಿದಡೆಯೂ ಫಲವಿಲ್ಲ. ಲಿಂಗವನರಿದ ಬಳಿಕ ಮತ್ತೇನರಿದಡೆಯೂ ಫಲವಿಲ್ಲ'' ಎಂದು ಶೂನ್ಯ ಸಿಂಹಾಸನಾಧಿಪತಿ ಪ್ರಭು ಅಪ್ಪಣೆ ಕೊಡಿಸಿರುವಾಗ ಬೇರೆ ಜ್ಞಾನದ ಅವಶ್ಯಕತೆಯೇ ಇಲ್ಲ. ಆದರೆ ಇತ್ತೀಚೆಗೆ ನಮ್ಮ ವೀರಶೈವರು ಇಂತಹ ಅತ್ಯಮೂಲ್ಯವಾದ ಲಿಂಗತತ್ವವನ್ನು ಅರಿಯದೆ ತೀರ್ಥ ಕ್ಷೇತ್ರಗಳಿಗೆ ತಿರುಗುವುದನ್ನು, ಗಿಡಮರಗಳನ್ನು ಕಂಡಾಗ ಸುತ್ತುವುದನ್ನೂ, ನೀರು ಕಂಡಲ್ಲಿ ಮುಳುಗುವುದನ್ನು ನೋಡಿ ವಿಷಾದವೆನಿಸದಿರಲಾರದು. ಇಷ್ಟಲಿಂಗದಲ್ಲಿ ಅವಿಶ್ವಾಸ ಮಾಡಿ ತೀರ್ಥಲಿಂಗಗಳಿಗೆ ನಮಸ್ಕರಿಸುವವರು ನೂರು ಬಾರಿ ನಾಯಿಯ ಜನ್ಮಕ್ಕೆ

ಬರುವರೆಂದು ಅಕ್ಕಮಹಾದೇವಿ ತನ್ನ ವಚನವೊಂದರಲ್ಲಿ ಉಲ್ಲೇಖಿಸಿದ್ದಾಳೆ.[೧] ಹೃದಯದಲ್ಲಿ ಲಿಂಗಧಾರಣ ಮಾಡಿಕೊಳ್ಳುವವನ ಜನ್ಮ ಸಾರ್ಥಕ ಹಾಗು ಕೃತಾರ್ಥ, ಅವನೇ ಮನುಷ್ಯಶ್ರೇಷ್ಠ ಎಂದು 'ಕ್ರಿಯಾಸಾರ' ದಲ್ಲಿ ಉಕ್ತವಾಗಿದೆ.[೨] 'ಶಿವಲಿಂಗಮನಂಗದಲ್ಲಿ ಸುಮ್ಮನೆ ಧರಿಸಿರ್ಪುದತ್ಯಧಿಕಂ ನಿರುತಂ ಶಿವಾಧವಾ'' ಎಂದು ಶಿವಾನುಭಾವಿ ಮಗ್ಗೆಯ ಮಾಯಿದೇವರು ಹೇಳಿದಂತೆ ಕನಿಷ್ಠ ಪಕ್ಷ ವೀರಶೈವರು ತಮ್ಮ ಎದೆಯ ಮೇಲೆ ಸದಾ ಲಿಂಗವನ್ನು ಧರಿಸಿಕೊಂಡಿದ್ದರೂ ಸಾಕು, ಅವರ ಜನ್ಮ ಸಾರ್ಥಕ. ಅಂಗದ ಮೇಲೆ ಲಿಂಗವುಳ್ಳವರೆಲ್ಲರೂ ಶರಣರ ದೃಷ್ಟಿಯಲ್ಲಿ ಶಿವಸ್ವರೂಪಿಗಳು. ಅಂತಹ ಶಿವಗುಣ (ಸದ್ಗುಣ) ಗಳನ್ನು ಸಂಪಾದಿಸಿ ಶಾಶ್ವತ ಶಾಂತಿಯನ್ನು ಪಡೆಯುವದೇ ಲಿಂಗತತ್ವದ ಮುಖ್ಯ ಗುರಿ.

ಪ್ರಸ್ತುತ ಈ ಚಿಕ್ಕ ಗ್ರಂಥದಲ್ಲಿ ವೀರಶೈವ ಧರ್ಮಾನುಯಾಯಿಗಳು 'ಇಷ್ಟಲಿಂಗೋಪಾಸನೆ' ಎಂಬ ಪ್ರಮುಖ ಧಾರ್ಮಿಕ ಕ್ರಿಯೆಯೊಂದನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಆಚರಿಸಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ಬಸವಾದಿ ಪ್ರಮಥರ ವಚನಗಳನ್ನೇ ಸಾಂದರ್ಭಿಕವಾಗಿ ಮತ್ತು ಅನುಕ್ರಮವಾಗಿ ಒಂದೆಡೆ ಸೇರಿಸಿ ಕೊಡಲಾಗಿದೆ. ಸಂಸ್ಕೃತ ಮಂತ್ರಗಳು ನಮಗೆ ಬರುವುದಿಲ್ಲ ಹಾಗು ಅವುಗಳ ಅರ್ಥವೂ ನಮಗಾಗುವುದಿಲ್ಲ. ಇಷ್ಟಲಿಂಗಾರ್ಚನೆ ಹೇಗೆ ಮಾಡಿಕೊಳ್ಳುವುದು? ಎಂಬ ಕೊರಗುಬೇಡ. ಬಸವಾದಿ

---

೧. ಇಷ್ಟಲಿಂಗಮವಿಶ್ವಸ್ಯ ತೀರ್ಥ ಲಿಂಗಂ ನಮಸ್ಕೃತಃ।
ಶ್ವಾನ ಯೋನಿ ಶತಂಗತ್ವಾಚಾಂಡಾಲ ಗೃಹಮಾಚರೇತ್॥

೨. ಯೋ ಲಿಂಗಂ ಹೃದಿ ಧಾರಯೇತ್ ತಸ್ಯೈವ ಸಫಲಂ ಜನ್ಮ
ಕೃತಾರ್ಥಃ ಸ ನರೋತ್ತಮಃ (ಕ್ರಿಯಾಸಾರ ೮–೧)

ಪ್ರಮಥರ ವಚನಗಳು ನಮಗೆ ಅರ್ಥವಾಗದ ಸಂಸ್ಕೃತ ಮಂತ್ರಗಳಿಗಿಂತಲೂ ಅರ್ಥಪೂರ್ಣವಾಗಿವೆ ಹಾಗೆಯೇ ಸಂದರ್ಭೋಚಿತವಾಗಿವೆ. ಅತ್ಯಂತ ಚಿಕ್ಕಗಾತ್ರದಲ್ಲಿರುವ ಇಂಥ ವಚನಗಳನ್ನು ಕಂಠಪಾಠಮಾಡಿ, ನಮ್ಮ ಮಕ್ಕಳಿಗೂ ಕಂಠಪಾಠಮಾಡಿಸಿ ಇಷ್ಟಲಿಂಗಾರ್ಚನೆಯ ಕ್ರಮವನ್ನು ಕಲಿಯುತ್ತ ಕಲಿಸಬಹುದಾಗಿದೆ.

ಪ್ರತಿಯೊಬ್ಬ ವೀರಶೈವನು ದಿನದಲ್ಲಿ ಒಂದು ಸಲವಾದರೂ ಇಷ್ಟಲಿಂಗಾರ್ಚನೆ ಮಾಡಿಕೊಳ್ಳಬೇಕು. ಕುಡಿಯಲು ನೀರು, ಉಣ್ಣಲು ಅನ್ನ, ಉಡಲು ಬಟ್ಟೆ, ಉಸಿರಾಡಲು ಗಾಳಿ, ಬದುಕಲು ಭೂಮಿಯನ್ನು ದಯಪಾಲಿಸಿದ ಪರಾತ್ಪರ ಪರಮಾತ್ಮನಿಗೆ ದಿನದಲೊಂದು ಬಾರಿಯಾದರೂ ಕೃತಜ್ಞತಾಸಮರ್ಪಣೆ ಬೇಡವೆ? ಸಾಂಸಾರಿಕ ಜಂಜಡಗಳಲ್ಲಿ ಸಿಕ್ಕು ವ್ಯಾಕುಲಗೊಂಡ ಜೀವಕ್ಕೆ ಶಾಂತಿ–ಸಮಾಧಾನ ಬೇಡವೆ? ತಿಳಿದು, ತಿಳಿಯದೆ ಮಾಡುವ ದೋಷಗಳಿಗೆ ಪರಿಹಾರ ಬೇಡವೆ? ಅಂಗ–ಮನ–ಭಾವಗಳು ಪರಿಶುದ್ಧಗೊಂಡು ಪರಮಾತ್ಮನಲ್ಲಿ (ಲಿಂಗದಲ್ಲಿ) ಬೆರೆಸಿ ಬೇರಿಲ್ಲದಂತಾಗಿ ಲಿಂಗಾಂಗ ಸಾಮರಸ್ಯ ಸುಖವನ್ನು (ಶಾಶ್ವತಸುಖ) ಅನುಭವಿಸ ಬೇಡವೆ? ಬೇಕು. ಬೇಕು. ಬೇಕು. ಹಾಗಾದರೆ ಬಸವಾದಿ ಪ್ರಮಥರ ವಚನಾಧಾರಿತ ಇಷ್ಟಲಿಂಗೋಪಾಸನೆ ಮಾಡುವುದೊಂದೇ ಉಳಿದಿರುವ ದಾರಿ. ಈ ಕ್ರಿಯೆಯನ್ನು ಭಕ್ತಿಯಿಂದ ಆಚರಿಸಿದರೆ ಜೀವನದಲ್ಲಿ ಎದುರಾಗುವ ಅಪರಿಮಿತ ಸಮಸ್ಯೆಗಳನ್ನು ಎದುರಿಸಿ ಸಮಾಧಾನ ಪಡೆಯಬಲ್ಲಿರಿ. ಸರ್ವಶಕ್ತ ಪರಮಾತ್ಮನಲ್ಲಿ ನಂಬಿಕೆ, ಶ್ರದ್ಧೆ ಹಾಗು ಭಕ್ತಿ ಇಲ್ಲದ ಪೂಜೆ ನಿರರ್ಥಕ. ''ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ ಚಿತ್ರದ ರೂಹುಕಾಣಿರಣ್ಣ ಚಿತ್ರದ ಕಬ್ಬು ಕಾಣಿರಣ್ಣ ಅಪ್ಪಿದರೆ ಸುಖವಿಲ್ಲ ಮೆಲಿದರೆ ರುಚಿಯಿಲ್ಲ'' ಅಲ್ಲದೆ ''ಲಿಂಗದಮೇಲೆ

ನಿಷ್ಠೆಯಿಲ್ಲದ ಭಕ್ತ ಇದ್ದಡೇನೋ? ಶಿವ, ಶಿವಾ ಹೋದಡೇನೋ?''
ಎಂದು ವಿಶ್ವಗುರು ಬಸವಣ್ಣನವರು ಹೇಳಿದಂತಾಗುವುದು. ಕಾರಣ ಭಕ್ತಿ, ಶ್ರದ್ಧೆಯಿಂದ ಇಷ್ಟಲಿಂಗವನ್ನು ಪೂಜಿಸುವುದು ಸೂಕ್ತ

ಪ್ರತಿನಿತ್ಯ ತುಂಬ ಶ್ರದ್ಧೆಯಿಂದ ಮಾಡುವ ಇಷ್ಟಲಿಂಗಾರ್ಚನೆಯಿಂದ ನಮ್ಮಲ್ಲಿರುವ ದ್ವೇಷಾಸೂಯೆಗಳು, ಕಾಮಕ್ರೋಧಾದಿ ಅಂಗಗುಣಗಳು ಲುಪ್ತವಾಗಿ ಸತ್ಯ, ನ್ಯಾಯ, ನೀತಿ, ಪ್ರೀತಿ-ವಿಶ್ವಾಸ, ಸೌಹಾರ್ದತೆಗಳಂತಹ ಲಿಂಗಗುಣಗಳು ಅಳವಟ್ಟು ಶರಣ ಮಾರ್ಗದಲ್ಲಿ ನಡೆದು ಶಿವಯೋಗ-ದಾನಂದವನ್ನನುಭವಿಸುತ್ತ. ಸಮಾಜದಲ್ಲಿ ಗೌರವದಿಂದ ಬದುಕಲು ಸಾಧ್ಯವಾಗುವುದು. ಸಮಸ್ತ ವೀರಶೈವ ಧರ್ಮಾನುಯಾಯಿಗಳು ಅನುದಿನವೂ ಇಷ್ಟಲಿಂಗಾರ್ಚನೆ ಮಾಡಿಕೊಳ್ಳಬೇಕೆಂಬ ಸವಿನಯ ಕೋರಿಕೆಯೊಂದಿಗೆ ನನ್ನ ಮಾತಿಗೆ ಮಂಗಲ ಹಾಡುವೆ.

ಶ್ರೀ ಸಿದ್ಧರಾಮ ಸ್ವಾಮಿಗಳು
ರುದ್ರಾಕ್ಷಿಮಠ, ನಾಗನೂರು – ಬೆಳಗಾವಿ.

ಶ್ರೀ ಗುರು ಬಸವಲಿಂಗಾಯ ನಮಃ

ಸಂಕ್ಷಿಪ್ತ ಲಿಂಗಪೂಜಾ ವಿಧಾನ

ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆದ ಪ್ರತಿಯೊಬ್ಬ ಲಿಂಗವಂತನು ಪ್ರಾತಃಕಾಲದಲ್ಲಿ ಬಸವಾದಿ ಪ್ರಮಥರನ್ನೂ, ಇಷ್ಟಲಿಂಗವನ್ನು ಧ್ಯಾನಿಸುತ್ತ ಶಿವಯೋಗ ನಿದ್ರೆಯಿಂದ 'ಏಳಬೇಕು. ಪ್ರಾತರ್ವಿಧಿಗಳನ್ನು ಪೂರೈಸಿ ಶುದ್ಧ ನೀರಿನಿಂದ ಸ್ನಾನ ಮಾಡಬೇಕು. ನಂತರ ಶಿವಪೂಜಾ ಪರಿಕರಗಳನ್ನು ಸಿದ್ಧಮಾಡಿಕೊಂಡು ಪೂರ್ವ ಅಥವಾ ಉತ್ತರಾಭಿಮುಖವಾಗಿ ಬಸವಸ್ಮರಣೆಯೊಂದಿಗೆ ಆಸನದ ಮೇಲೆ ಕುಳಿತುಕೊಳ್ಳಬೇಕು. ಹಣೆಗೆ ಭಸ್ಮ ಧರಿಸಿಕೊಂಡು ಇಷ್ಟಲಿಂಗಕ್ಕೆ ಸಂಕ್ಷಿಪ್ತಾಭಿಷೇಕ ಮಾಡಿ ವಸ್ತ್ರದಿಂದ ದ್ರವ ತೆಗೆದು ವಿಭೂತಿ ಧರಿಸಿ ಸಜ್ಜಿಕೆಯಲ್ಲಿ ಮೂರ್ತಗೊಳಿಸಬೇಕು.

ಶುದ್ಧೋದಕ : ಬಲ ಹಸ್ತಕ್ಕೆ ಭಸ್ಮ ಲೇಪಿಸಿಕೊಂಡು ಕಿರಿಬೆರಳಿನಿಂದ ಅಂಗುಷ್ಟ ಬೆರಳಿನವರೆಗೆ ನ,ಮ,ಶಿ,ವಾ,ಯ ಪ್ರಣವ ಸಂಬಂಧಿಸಿ ನೀರು ತುಂಬಿದ ತಾಲಿ (ವಾಟೆ)ಯನ್ನು ಹಸ್ತದಿಂದ ಮುಟ್ಟಿ ಮಹಾಮಂತ್ರ (ಓಂ ನಮಃ ಶಿವಾಯ) ದಿಂದ ಹನ್ನೊಂದು (೧೧) ಸಾರೆ ಅಭಿಮಂತ್ರಿಸಿ, ನೀರಿನಲ್ಲಿ ಪ್ರಣವ ಬರೆದು ಐದೂ ಬೆರಳು ಅದ್ದಿ ಶಿವಪೂಜಾ ಸಾಮಗ್ರಿಗಳಿಗೂ, ತನ್ನ ಸರ್ವಾಂಗಕ್ಕೂ ಪ್ರೋಕ್ಷಿಸಬೇಕು.

ಪರಿಕರ = ಪೂಜೆಗೆ ಬೇಕಾಗುವ ನೀರು, ಭಸ್ಮ, ಗಂಧ, ಅಕ್ಷತೆ, ಪತ್ರಿ, ಹೂ, ಇತ್ಯಾದಿ ವಸ್ತುಗಳು
ಪ್ರೋಕ್ಷಿಸು = ಸಿಂಪಡಿಸು
ಪ್ರಣವ = ಓಂ ಕಾರ

ಗುರುಧ್ಯಾನ

ಸರಿಯಾಗಿ ಋಜುಕಾಯನಾಗಿ ಕೈಮುಗಿದು ಕುಳಿತು ದುರ್ಗುಣ, ದುರ್ವಾಸನಾದಿಗಳ ನಿವಾರಣೆಗಾಗಿ, ಶಿವಭಕ್ತಿ, ಶಿವಜ್ಞಾನಗಳ ಸಂಪಾದನೆ ಹಾಗು ಗುರುಜಂಗಮ ಪ್ರಸಾದ ಸಿದ್ಧಿಗ್ಗಾಗಿ ಧರ್ಮಗುರು, ದೀಕ್ಷಾ ಗುರುಗಳನ್ನು ಭಕ್ತಿಯಿಂದ ಕಣ್ಮುಚ್ಚಿ ಧ್ಯಾನ ಮಾಡಬೇಕು.



ಧರ್ಮಗುರು ಧ್ಯಾನ :

★ ಬಸವಂ ಭಕ್ತಿಗೆ ಮೂಲಂ
ಬಸವಂ ಕಾಲಂಗೆ ಕಾಲನನುಪಮಶೀಲಂ
ಬಸವಂ ಜಂಗಮಲೋಲಂ
ಬಸವಾ ರಕ್ಷಿಪ್ಪುದೆನ್ನ ಸಂಗನಬಸವಾ॥

★ ಒಮ್ಮೆಯು ಶ್ರೀಗುರುವಿನ ಶ್ರೀಚರಣವ
ನೆನೆದಡೆ ಭವಬಂಧನ ಬಿಡುವದು

ಗುರುವೆ ಶರಣು, ಗುರುಲಿಂಗವೆ ಶರಣು
ಹರಿಬ್ರಹ್ಮಾದಿಗಳಿಗೆ ಅಗೋಚರವಾದ
ಕೂಡಲ ಚನ್ನಸಂಗಯ್ಯನೆಂಬ ಲಿಂಗವ ತೋರಿದ
ಬಸವ ಗುರುವೆ ಶರಣು, ಶರಣು.

ದೀಕ್ಷಾ ಗುರುಧ್ಯಾನ :

★ ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ
ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ
ಭವಿ ಎಂಬುದ ತೊಡೆದು ಭಕ್ತ ಭಕ್ತ ಎಂದೆನಿಸಿದ ಗುರುವೆ
ಚನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ
ಶರಣು ಶರಣಾರ್ಥಿ

ಹೀಗೆ ಗುರುಧ್ಯಾನ ಮಾಡಿದ ನಂತರ ಅದೇ ಭಂಗಿಯಲ್ಲಿ ಕುಳಿತು 'ಸಂಕಲ್ಪ' ಮಾಡಬೇಕು.

ಸಂಕಲ್ಪ :

ಜಲ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ
ನೈವೇದ್ಯ, ತಾಂಬೂಲ, ಪಂಚವರ್ಣ ಪತ್ರಿ ಪುಷ್ಪದ
ಪೂಜೆಯ ರಚನೆಯ ಮಾಡುವೆನಯ್ಯ
ಅಷ್ಟವಿಧಾರ್ಚನೆ, ಷೋಢಶೋಪಚಾರ ಮುಖ್ಯವಾಗಿ
ಮಾಡುವೆನಯ್ಯ
ಸಕಲ ಕ್ಷೇಮದಿಂದ ನಡೆದು ನಿಮ್ಮ ಬಳಿಸಾರುವೆನು
ಕೂಡಲ ಚನ್ನಸಂಗಯ್ಯ

ಎಂಬ ವಚನದಿಂದ (ಧ್ಯಾನಸ್ಥಿತಿಯಲ್ಲಿ ಕುಳಿತು) ಸಂಕಲ್ಪಿಸಿ, ತದನಂತರ ನಮಸ್ಕಾರ ಪೂರ್ವಕ ಬಲಗೈಯಿಂದ ಭಸ್ಮವನ್ನು ತೆಗೆದುಕೊಂಡು, ಎಡಗೈಯಲ್ಲಿಟ್ಟು ಸಂಕ್ಷಿಪ್ತವಾಗಿ ಪೂಜಿಸಿದ ಬಳಿಕ ಉಭಯ ಕರತಲಗಳಿಗೆ ಭಸ್ಮ ಲೇಪಿಸಿಕೊಂಡು ಭಸ್ಮಸ್ನಾನ ಮಾಡಬೇಕು. (ಸರ್ವಾಂಗಕ್ಕೂ ಲೇಪಿಸಬೇಕು). ನಂತರ

ಭಸ್ಮಧಾರಣ :

★ ನೀರಿಗೆ ನೈದಿಲೆಯೇ ಶೃಂಗಾರ
ಸಮುದ್ರಕ್ಕೆ ತೆರೆಯೆ ಶೃಂಗಾರ
ನಾರಿಗೆ ಗುಣವೇ ಶೃಂಗಾರ
ಗಗನಕ್ಕೆ ಚಂದ್ರಮನೆ ಶೃಂಗಾರ
ನಮ್ಮ ಕೂಡಲ ಸಂಗನ ಶರಣರ ನೊಸಲಿಗೆ
ಶ್ರೀ ವಿಭೂತಿಯೇ ಶೃಂಗಾರ

★ ಸಕಲ ಕ್ರಿಯೆಗಳಿಗಿದು ಕವಚ
ಸಕಲ ವಶ್ಯಕ್ಕಿದು ಶುಭ ತಿಲಕ
ಸಕಲ ಸಂಪದಕ್ಕೆ ತಾಣವಿದು
ಅಘಟಿತ ಘಟಿತವೆನಿಸುವ ಅನುಪಮ ತ್ರಿಪುಂಡ್ರ
ಅಣುಮಾತ್ರ ವಿಭೂತಿಯು ಫಣೆಯೊಳಡೆ
ಎಣಿಕೆ ಇಲ್ಲದ ಭವಪಾಶ ಪರಿವುದು
ತ್ರಿಣಯ ನೀನೊಲಿದು ಧರಿಸಿದೆ ಎಂದೆನೆ
ಅನುಧರಿಸಿ ಬದುಕಿದೆ ಕೂಡಲಸಂಗಯ್ಯ.



ಈ ವಚನಗಳನ್ನು ಹೇಳುತ್ತ ಹಣೆ, ಭುಜ, ಕೈ, ಹೃದಯ, ಉದರ, ಬೆನ್ನುಗಳಿಗೆ ಭಸ್ಮಧಾರಣ ಮಾಡಿಕೊಳ್ಳಬೇಕು.

ರುದ್ರಾಕ್ಷಿಧಾರಣ :

ಅಯ್ಯಾ, ಎನಗೆ ರುದ್ರಾಕ್ಷಿಯೇ ಸರ್ವಪಾವನ,
ಅಯ್ಯಾ, ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ
ಅಯ್ಯಾ ನಿಮ್ಮಪಂಚವಕ್ತ್ರಂಗಳೇ
ಪಂಚಮುಖದ ರುದ್ರಾಕ್ಷಂಗಳಾದುವಾಗಿ
ಅಯ್ಯಾ ಕೂಡಲ ಸಂಗಮದೇವ
ಎನ್ನ ಮುಕ್ತಿಪಥಕ್ಕೆ ಈ ರುದ್ರಾಕ್ಷಿಯೆ ಸಾಧನವಯ್ಯ.

ಈ ವಚನೋಚ್ಚಾರ ಮಾಡುತ್ತ ರುದ್ರಾಕ್ಷಿಸರ ಪೂಜಿಸಿ ಕೊರಳಲ್ಲಿ ಧರಿಸಬೇಕು. ಕನಿಷ್ಟ ಒಂದು ರುದ್ರಾಕ್ಷಿಯನ್ನಾದರೂ ಧರಿಸಬೇಕು.

ಲಿಂಗಕ್ಕೆ ಮಜ್ಜನ :[೧]

ವಾಮ (ಎಡ) ಹಸ್ತದಲ್ಲಿ ಮೂಲಪ್ರಣವ (ಓಂ) ಬರೆದು, ಎಡಕ್ಕೆ ಗೋಮುಖವಾಗುವಂತೆ ಇಷ್ಟಲಿಂಗ ಮೂರ್ತಗೊಳಿಸಿ ಶುದ್ಧ ಉದಕದಿಂದ ಲಿಂಗಕ್ಕೆ ಕೆಳಗಿನ ವಚನಗಳನ್ನು ಹೇಳುತ್ತ ಮಜ್ಜನ ಮಾಡಬೇಕು.

---

೧ ಇಷ್ಟಲಿಂಗದ ಜೊತೆಗೆ ನೇರವಾದ ಸಂಭಾಷಣೆ ಮಾಡುವಂತಿರುವ, ಸರ್ವಶಕ್ತ ಸರ್ವಗುಣ ಸಂಪನ್ನ, ಪರಿಪೂರ್ಣ ಪರಶಿವನನ್ನು ಅನನ್ಯಗತಿಕನಾಗಿ ಪ್ರಾರ್ಥಿಸುವಂತೆ ಇರುವ ವಚನಗಳನ್ನು ಉಚ್ಚರಿಸುತ್ತ ಇಷ್ಟಲಿಂಗಾಭಿಷೇಕ ಮಾಡಬೇಕು.



ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

☆ ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ
ಪಾತಾಳದಿಂದ ಅತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದ ಅತ್ತತ್ತ ನಿಮ್ಮ ಶ್ರೀಮುಕುಟ
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೆ
ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

☆ ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು

ತ್ರಿಕರಣ ಶುದ್ಧ ವಿಲ್ಲದವರಲ್ಲಿ ತಾಂಬೂಲವನೊಲ್ಲೆ ಯಯ್ಯಾ
ನೀನು
ಹೃದಯಕಮಲವರಳದವರಲ್ಲಿ ಇರಲೊಲ್ಲೆ ಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥ ಲವನಿಂಬುಗೊಂಡೆ ಹೇಳಾ
ಚನ್ನ ಮಲ್ಲಿಕಾರ್ಜುನಯ್ಯಾ?
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

★ ಜಗವನೊಳಕೊಂಡ ಲಿಂಗವು ಸೊಗಸಿಂದೆ
ಎನ್ನ ಕರಸ್ಥಲಕ್ಕೆ ಬಂದಿರಲು
ಕಂಡು ಹಗರಣವಾಯಿತ್ತೆನಗೆ, ಗುರುಲಿಂಗ ಜಂಗಮ
ಸ್ವರೂಪವಾಗಿ ಮೂರ್ತಗೊಂಡಿತ್ತು ನೋಡಾ
ಅಹಾ ಎನ್ನ ಪುಣ್ಯವೆ, ಅಹಾ ಎನ್ನ ಭಾಗ್ಯವೆ
ಅಹಾ ಅಖಂಡೇಶ್ವರ, ನಿಮ್ಮ ಘನವ ಕಂಡು ಎನ್ನ
ಮನಕ್ಕೆ ಮಂಗಳವಾಯಿತ್ತು ನೋಡಾ.
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

★ ಮೇರು ಗುಣವನರಸುವದೆ ಕಾಗೆಯಲ್ಲಿ?
ಪರುಷ ಗುಣವನರಸುವದೆ ಕಬ್ಬುನದಲ್ಲಿ?
ಸಾಧು ಗುಣವನರಸುವದೆ ಅವಗುಣಿಯಲ್ಲಿ?
ಚಂದನಗುಣವನರಸುವದೆ ತರುಗಳಲ್ಲಿ?
ಸರ್ವ ಗುಣ ಸಂಪನ್ನ ಲಿಂಗವೆ ನೀನೆನ್ನಲ್ಲಿ
ಅವಗುಣವನರಸುವರೆ
ಕೂಡಲಸಂಗಮದೇವಾ?
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

★ ಬೆಳೆಯ ಭೂಮಿಯಲೊಂದು ಪ್ರಳಯದ ಕಸಹುಟ್ಟಿ
ತಿಳಿಯಲೀಯದು ಎಚ್ಚರಲೀಯದು
ಎನ್ನವಗುಣವೆಂಬ ಕಸವಕಿತ್ತು ಸಲಹಯ್ಯಾ ಲಿಂಗತಂದೆ
ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವಾ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

☆ ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

☆ ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ
ಸಲಹುತ್ತ ಶಿವ ಶಿವಾ ಎಂದೋದಿಸಯ್ಯ
ಭಕ್ತಿ ಎಂಬ ಪಂಜರದೊಳಗಿಕ್ಕಿ ಸಲಹು
ಕೂಡಲಸಂಗಮದೇವ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ


☆ ನೀನೊಲಿದರೆ ಕೊರಡು ಕೊನರುವುದಯ್ಯಾ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥ
ಇದರಲ್ಲಿರ್ಪವು ಕೂಡಲಸಂಗಮದೇವಾ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

☆ ವಿಷಯವೆಂಬ ಹಸುರನೆನ್ನ ಮುಂದೆ ತಂದು
ಪಸರಿಸಿದೆಯಯ್ಯಾ
ಪಶುವೇನಬಲ್ಲುದು? ಹಸುರೆಂದೆಳಸುವದು
ವಿಷಯ ರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬ ಉದಕವನೆರೆದು
ನೋಡಿ ಸಲಹಯ್ಯ, ಕೂಡಲಸಂಗಮದೇವಾ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

★ ಎನ್ನ ವಾಮ–ಕ್ಷೇಮ ನಿಮ್ಮದಯ್ಯ
ಎನ್ನ ಹಾನಿ – ವೃದ್ಧಿ ನಿಮ್ಮದಯ್ಯ
ಎನ್ನ ಮಾನಾಪಮಾನ ನಿಮ್ಮದಯ್ಯ
ಬಳ್ಳಿಗೆ ಕಾಯಿ ದಿಮ್ಮಿತ್ತೆ, ಕೂಡಲಸಂಗಮದೇವಾ
ಬಸವ ಓಂ ಶ್ರೀ ಗುರು ಬಸವಲಿಂಗಾಯ ನಮಃ

ಹೀಗೆ ವಚನಗಳನ್ನು ಹೇಳುತ್ತ ನೀರಿನಿಂದ ಇಷ್ಟಲಿಂಗಕ್ಕೆ ಅಭಿಷೇಕ ಮಾಡಬೇಕು. ನಂತರ ಮಡಿವಸ್ತ್ರದಿಂದ ದ್ರವವನ್ನು ತೆಗೆದು, ಎಡಹಸ್ತದಲ್ಲಿ ಭಸ್ಮದಿಂದ

(೧)



ಬರೆದು, ಎಡಕ್ಕೆ ಗೋಮುಖವಾಗುವಂತೆ ಇಷ್ಟಲಿಂಗವನ್ನು ಮೂರ್ತಗೊಳಿಸಬೇಕು. ಆಮೇಲೆ ಮುಂದಿನ ವಚನೋಚ್ಚಾರ ಮಾಡುತ್ತ ಇಷ್ಟಲಿಂಗಕ್ಕೆ ವಿಭೂತಿ, ಗಂಧ, ಅಕ್ಷತೆ ಇತ್ಯಾದಿಗಳನ್ನು ಧರಿಸಬೇಕು.

---

(೧) ಮಧ್ಯದ ತಾಣ ಹೃದಯ, ಮೇಲಿನ ಕೋನ ಶಿರಸ್ಸು, ಪಕ್ಕದ ಎರಡು ಕೋನಗಳು ಭುಜದ್ವಯಗಳು, ಕೆಳಗಿನ ಎರಡು ಕೋನಗಳು ತೊಡೆಗಳು. ಇದು ಜೀವಾತ್ಮನ ಸಂಕೇತವಾಗಿದೆ.

"ಓಂ ಕಾರೋ ವದನಂ ವಿದ್ದಿ ನಮಃ ಕಾರೌ ಭುಜದ್ವಯಂ।
ಶಿಕಾರೋ ದೇಹಮಧ್ಯಸ್ತು ವಾಯಕಾರೌ ಪದದ್ವಯಂ॥"

ಲಿಂಗೋಪಚಾರ :

ಎನ್ನ ಹೃದಯಕಮಲ ಮಧ್ಯದಲ್ಲಿ ಮೂರ್ತಗೊಂಡಿಪ್ಪ
ಎನ್ನ ಪ್ರಾಣೇಶ್ವರಂಗೆ ಎನ್ನ ಕ್ಷಮೆಯೆ ಅಭಿಷೇಕ
ಎನ್ನ ಚಿದ್ರೂಪವೇ ಭಸ್ಮ ಎನ್ನ ಸಮಾಧಿ ಸಂಪತ್ತೆ ಗಂಧ
ಎನ್ನ ನಿರಹಂಕಾರವೆ ಅಕ್ಷತೆ,
ಎನ್ನ ಅರಿವು, ಆಚಾರ ಅನುಭಾವಗಳೆ ತ್ರಿದಳ
ಎನ್ನ ಪರಮ ವೈರಾಗ್ಯವೇ ಪುಷ್ಪದ ಮಾಲೆ
ಎನ್ನ ಸದ್ವಿವೇಕವೆ ವಸ್ತ್ರ, ಎನ್ನ ಸತ್ಯವೇ ದಿವ್ಯಾಭರಣ
ಎನ್ನ ವಿಶ್ವಾಸವೇ ಧೂಪ, ಎನ್ನ ದಿವ್ಯ ಜ್ಞಾನವೇ ದೀಪ
ಎನ್ನ ನಿಭ್ರಾಂತಿಯೆ ನೈವೇದ್ಯ ಎನ್ನ ನಿರ್ವಿಕ್ಷಯವೇ ತಾಂಬೂಲ
ಎನ್ನ ಮಾನವೆ, ಘಂಟೆ, ಎನ್ನ ನಿರ್ವಿಕಲ್ಪನೆಯೆ ಪ್ರದಕ್ಷಿಣೆ
ಎನ್ನ ಶುದ್ಧಿಯೇ ನಮಸ್ಕಾರ
ಎನ್ನ ಅಂತಃ ಕರಣದಿಂದ ಮಾಡುವ ಸೇವೆಯೆ ಉಪಚಾರಂಗಳು
ಈ ಪರಿಯಲ್ಲಿ ಎಮ್ಮ ಗುಹೇಶ್ವರಲಿಂಗಕ್ಕೆ
ಪ್ರಾಣಲಿಂಗ ಪೂಜೆಯ ಮಾಡಿ ಬಾಹ್ಯ ಕ್ರಿಯೆಯ ಮರೆದೆನಯ್ಯ

ಈ ಮೇಲಿನ ವಚನ ಉಚ್ಚರಿಸುತ್ತ ಭಸ್ಮ ಧೂಪ, ದೀಪಾದಿ ಷೋಡಶೋಪಚಾರ ನೆರವೇರಿಸಬೇಕು.

ಲಿಂಗನಿರೀಕ್ಷೆ :

ಚಿನ್ಮಯ, ಚಿತ್ಪ್ರಕಾಶ ಚಿದಾನಂದ ಲಿಂಗವೆ
ಎನ್ನ ಹೃದಯಕಮಲದಲ್ಲಿ ಬೆಳಗಿ ತೋರುವ ಪರಂಜ್ಯೋತಿ
ಎನ್ನ ಕರಸ್ಥಲಕ್ಕನುವಾದ ಧರ್ಮಿ
ಎನ್ನ ಕಂಗಳಕೊನೆಯಲ್ಲಿ ಮೂರ್ತಗೊಂಡಿಪ್ಪೆಯಯ್ಯಾ
ಕೂಡಲ ಸಂಗಮದೇವಯ್ಯ

ಎಂಬ ವಚನ ಹೇಳಿ ಇಷ್ಟಲಿಂಗವನ್ನು ಎಡಗೈಯಲ್ಲಿರಿಸಿ ಕೈಯನ್ನು ಮೂಗಿನ ತುದಿಗೆ ಸಮನಾಗಿ ಹನ್ನೆರಡು ಅಂಗುಲ ದೂರದಲ್ಲಿ ಹಿಡಿದು ಕಣ್ಣುರೆಪ್ಪೆಗಳನ್ನು ಪೂರ್ಣ ತೆರೆಯದೆ

ಪೂರ್ಣಮುಚ್ಚದೆ (ಅನಿಮಿಷದೃಷ್ಟಿಯಿಂದ) ನಿರೀಕ್ಷಿಸಬೇಕು. (ಇಂತಿಷ್ಟೆ ಸಮಯ ನಿರೀಕ್ಷಿಸಬೇಕೆಂಬ ನಿಯಮವಿಲ್ಲ, ಆದರೆ ನಿರೀಕ್ಷೆಯೊಡನೆ ಮಾನಸಿಕವಾಗಿ ಓಂ ನಮಃ ಶಿವಾಯ ಮಂತ್ರಧ್ಯಾನ ಇರುವುದು ಸೂಕ್ತ).



ಜಪ :[೧]

ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯ
ಓಂ ನಮಃ ಶಿವಾಯ; ಓಂ ನಮಃ ಶಿವಾಯ
ಎನಗಿದೇ ಮಂತ್ರ, ಎನಗಿದೇ ಜಪ
ಕೂಡಲ ಸಂಗಮದೇವಾ ನೀನೆ ಬಲ್ಲೆ, ಎಲೆ ಲಿಂಗವೆ

ಎನ್ನುತ್ತ ಬಲಹಸ್ತಕ್ಕೆ ಭಸ್ಮ ಲೇಪಿಸಿಕೊಂಡು ಗುರುಗಳು ಉಪದೇಶ ಮಾಡಿದ ಮಹಾಮಂತ್ರವನ್ನು (ಓಂ ನಮಃ ಶಿವಾಯ)

---

೧. ಜಪಕ್ರಮವನ್ನು ಗುರುಮುಖದಿಂದ ಅರಿಯಬೇಕು.

ಕನಿಷ್ಠ ೧೦೮ ಸಾರೆ ಅಥವಾ ಸಾಧ್ಯವಾದಷ್ಟು ಜಪ ಮಾಡಬೇಕು. ನಂತರ ಕೆಳಗೆ ಬರೆದ ವಚನದ ಒಂದೊಂದು ಸಾಲು ಹೇಳುತ್ತ ಸಾಧ್ಯವಾದರೆ ಒಂದೊಂದು ಪತ್ರಿ ಅಥವಾ ಒಂದೊಂದು ಹೂ (ಪುಷ್ಪ) ಧರಿಸಬೇಕು.



ನಾಮಾವಳಿ :[೧]

ಹರಬಸವಾಯ ನಮಃ
ಪ್ರಭು ಬಸವಾಯ ನಮಃ
ಗುರು ಬಸವಾಯ ನಮಃ
ಲಿಂಗ ಬಸವಾಯ ನಮಃ
ಜಂಗಮ ಬಸವಾಯ ನಮಃ
ಭಸ್ಮ ಬಸವಾಯ ನಮಃ

---

೧. ಅನುಬಂಧ ೨ ರಲ್ಲಿ ಇರುವ ಪದ್ಯಗಳನ್ನು ಈ ಸಂದರ್ಭದಲ್ಲಿ ಬಳಸಿಕೊಳ್ಳಬಹುದು.

ರುದ್ರಾಕ್ಷಿ ಬಸವಾಯ ನಮಃ
ಮಂತ್ರ ಬಸವಾಯ ನಮಃ
ಪಾದೋದಕ ಬಸವಾಯ ನಮಃ
ಪ್ರಸಾದ ಬಸವಾಯ ನಮಃ
ಚಿನ್ನಿಧಿ ಬಸವಾಯ ನಮಃ
ಚಿನ್ನಾದ ಬಸವಾಯ ನಮಃ
ಚಿದ್ಬಿಂದು ಬಸವಾಯ ನಮಃ
ಚಿತ್ಕಲೆ ಬಸವಾಯ ನಮಃ
ಚಿದಂಗ ಬಸವಾಯ ನಮಃ
ನಿಃಸಂಸಾರ ಬಸವಾಯ ನಮಃ
ನಿಷ್ಪ್ರಪಂಚ ಬಸವಾಯ ನಮಃ
ನಿರಂಜನ ಬಸವಾಯ ನಮಃ
ನಿರ್ಗುಣ ಬಸವಾಯ ನಮಃ
ನಿತ್ಯ ತೃಪ್ತ ಬಸವಾಯ ನಮಃ
ಅಕಾರ ಬಸವಾಯ ನಮಃ
ಉಕಾರ ಬಸವಾಯ ನಮಃ
ಮಕಾರ ಬಸವಾಯ ನಮಃ
ನ ಕಾರ ಬಸವಾಯ ನಮಃ
ಮಃಕಾರ ಬಸವಾಯ ನಮಃ
ಶಿ ಕಾರ ಬಸವಾಯ ನಮಃ
ವ ಕಾರ ಬಸವಾಯ ನಮಃ
ಯ ಕಾರ ಬಸವಾಯ ನಮಃ
ಓಂ ಕಾರ ಬಸವಾಯ ನಮಃ
ಹ್ರೀಂ ಕಾರ ಬಸವಾಯ ನಮಃ
ಸಂಗಮೇಶ್ವರ ಬಸವಾಯ ನಮಃ
ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ
ಬಸವಾಯ ನಮೋ ನಮಃ

ಹೀಗೆ ನಾಮಾವಳಿಯು ಮುಗಿದನಂತರ ಕರ್ಪುರ ಹಚ್ಚಿ ಮಂಗಳಾರತಿ ಹೇಳಬೇಕು.



ಮಂಗಳಾರತಿ :[೧]

ಜಯಲಿಂಗ ಜಯಲಿಂಗ ಜಯಮಂಗಲ ಚಿಲ್ಲಿಂಗ
ಜಯ ಪರತರ ಶಿವಲಿಂಗ ಜಯಲಿಂಗ ಜಯಲಿಂಗ ॥ಪ॥

ಕರದೀಪನಿಭ ಲಿಂಗ ವರಬಿಂದು ಘ್ರಾಣಲಿಂಗ
ಸುರುಚಿರ ಶಿವ ರುಚಿಲಿಂಗ ಜಯಲಿಂಗ ಜಯಲಿಂಗ ॥೧॥

ಭೂವನಮಯಪತಿಲಿಂಗ ಪಾವಕಮರುದುರುಲಿಂಗ
ಭಾವುಕ ನಭೋ ಮಹಾಲಿಂಗ ಜಯಲಿಂಗ ಜಯಲಿಂಗ ॥೨॥

ಶಿವಯೋಗೀಷ್ಟದ ಲಿಂಗ ಶಿವ ಹೃದಯ ಪ್ರಭುಲಿಂಗ
ಶಿವಯೋಗಾಲಯಲಿಂಗ ಜಯಲಿಂಗ ಜಯಲಿಂಗ ॥೩॥

---

೧. ಅನುಬಂಧ ಒಂದರಲ್ಲಿ ಬೇರೆ ಬೇರೆ ಮಂಗಳಾರತಿ ಪದ್ಯಗಳಿವೆ ನೋಡಬಹುದಾಗಿದೆ.

ಪುಷ್ಪಾಂಜಲಿ :

ತಂದೆ ನೀನು, ತಾಯಿ ನೀನು, ಬಂಧು ನೀನು
ಬಳಗ ನೀನು, ಎನಗೆ ನೀನಲ್ಲದೆ ಮತ್ತಾರೂ ಇಲ್ಲವಯ್ಯ
ಕೂಡಲ ಸಂಗಮದೇವಾ ಹಾಲಲದ್ದು ನೀರಲ್ಲದ್ದು ನಿಮ್ಮ ಧರ್ಮ
ಜಯಮಂಗಲಂ ಜಯಗುರು ಬಸವೇಶ ಹರಹರ ಮಹಾದೇವ

ಎಂದು ಹೇಳಿ ನಿರ್ಮಾಲ್ಯ ವಿಸರ್ಜನೆ ಮಾಡಬೇಕು. ನಂತರ ಇಷ್ಟಲಿಂಗಕ್ಕೆ ವಿಭೂತಿ ಧರಿಸಿ ಕರಡಿಗೆಯಲ್ಲಿ ಮೂರ್ತಗೊಳಿಸಬೇಕು.

ಅರ್ಪಣ (ಪಾದೋದಕ – ಪ್ರಸಾದ)

ಇಷ್ಟಲಿಂಗ ಪೂಜೆಯು ಮುಗಿದ ನಂತರ ಪಾದೋದಕ ಮತ್ತು ಪ್ರಸಾದ ಸ್ವೀಕರಿಸಲೇ ಬೇಕು. ಗುರುಜಂಗಮರ ಕ್ರಿಯಾಪಾದೋದಕ ಅಥವಾ ಗುರುಪಾದೋದಕವನ್ನು ಸ್ವೀಕರಿಸುವುದು ಶ್ರೇಯಸ್ಕರವು. ಗುರು–ಜಂಗಮರು ಲಭ್ಯವಿಲ್ಲದಾಗ ಲಿಂಗಪಾದೋದಕವನ್ನು ಸ್ವೀಕರಿಸಬೇಕು.

ಲಿಂಗಪಾದೋದಕವನ್ನು ಮಾಡಿಕೊಳ್ಳುವ ವಿಧಾನ : ಪಾದೋದಕ ಸಿದ್ಧಪಡಿಸಿಕೊಳ್ಳಬೇಕೆನ್ನುವವರು ದಿನನಿತ್ಯ ಪ್ರಸಾದ ಸ್ವೀಕರಿಸುವ ತಾಟು, ಒಂದು ಸಣ್ಣಬಟ್ಟಲು, ಒಂದು ವಾಟೆ ಹಾಗು ಶುದ್ಧವಾದ ಕುಡಿಯುವ ನೀರು ತುಂಬಿದ ಒಂದು ತಂಬಿಗೆಯನ್ನು ತೆಗೆದುಕೊಳ್ಳಬೇಕು. ಪ್ರಸಾದ ತಟ್ಟೆಯಲ್ಲಿ (ತಾಟು) ಸಣ್ಣ

ನಿರ್ಮಾಲ್ಯ: ಲಿಂಗಕ್ಕೆ ಧರಿಸಿದ ಹೂಪತ್ರಿಗಳು
ಕರಡಿಗೆ = ಪೂಜೆಯನಂತರ ಲಿಂಗವನ್ನಿಟ್ಟು ಧರಿಸಿಕೊಳ್ಳುವ ಸಣ್ಣ ಸಜ್ಜಿಕೆ.
ಮೂರ್ತಗೊಳಿಸು = ಇಟ್ಟುಕೊಳ್ಳು.

ಬಟ್ಟಲನ್ನು ಇಟ್ಟು ಅದರಲ್ಲಿ ಕುಡಿಯುವ ನೀರು ತುಂಬಿದ ವಾಟೆಯನ್ನಿಟ್ಟುಕೊಳ್ಳಬೇಕು. ಬಲಹಸ್ತಕ್ಕೆ ಭಸ್ಮ ಲೇಪಿಸಿಕೊಂಡು ಕನಿಷ್ಟ ಹನ್ನೆರಡುಸಾರೆ ಮಹಾಮಂತ್ರವನ್ನು (ಓಂ ನಮಃ ಶಿವಾಯ) ಜಪಿಸಿ ಮಧ್ಯದ ಬೆರಳಿನಿಂದ ನೀರು ತುಂಬಿದ ವಾಟೆಯಲ್ಲಿ ಓಂಕಾರವನ್ನು ಬರೆದು ಮಂತ್ರೋದಕ ಮಾಡಿಕೊಳ್ಳಬೇಕು. ನಂತರ ವಾಟೆಯನ್ನು ಕಡೆಗೆ ತೆಗೆದಿಟ್ಟು ಐದೂ ಬೆರಳುಗಳನ್ನು ಅದರಲ್ಲಿ ಅದ್ದಿ ಪ್ರಸಾದತಟ್ಟೆ ಹಾಗು ಬಟ್ಟಲುಗಳಿಗೆ ಮಂತ್ರೋದಕವನ್ನು ಸಿಂಪಡಿಸಿ ದ್ರವವಸ್ತ್ರದಿಂದ ವರೆಸಿ ಸ್ವಚ್ಛವಾಗಿಸಬೇಕು. ಆಮೇಲೆ ಪ್ರಸಾದ ತಟ್ಟೆ ಹಾಗು ಬಟ್ಟಲುಗಳಿಗೆ ಭಸ್ಮ ಧರಿಸಿ "ಓಂಕಾರ" ಬರೆಯಬೇಕು. ಎಡಕ್ಕೆ ಗೋಮುಖವಾಗುವಂತೆ ಇಷ್ಟಲಿಂಗವನ್ನು ಎಡ ಅಂಗೈಯಲ್ಲಿ ಇಟ್ಟುಕೊಂಡು ವಾಟೆಯಲ್ಲಿರುವ ಮಂತ್ರೋದಕವನ್ನು ಮೂರುಬಾರಿ ಗುರುಗಳ ಪಾದಾಂಗುಷ್ಠದ ಮೇಲೆ ಎರೆಯುತ್ತಿರುವಂತೆ ಪರಿಭಾವಿಸಿ ಬಟ್ಟಲಿಗೆ ಹಾಕಿಕೊಳ್ಳಬೇಕು. ನಂತರ ಐದೂ ಬೆರಳುಗಳನ್ನು ಬಟ್ಟಲಿನಲ್ಲಿ ಅದ್ದಿ ಬೆರಳಿನಲ್ಲಿ ಸಂಗ್ರಹವಾದ ಪಾದೋದಕವನ್ನು ಎಡ ಅಂಗೈಯಲ್ಲಿ ಇರುವ ಇಷ್ಟಲಿಂಗಕ್ಕೆ ಮೂರು ಬಾರಿ ಎರೆಯಬೇಕು. ಎರೆಯುವಾಗ ಅನುಕ್ರಮವಾಗಿ ಗುರುಪಾದೋದಕ ಲಿಂಗಪಾದೋದಕ ಹಾಗು ಜಂಗಮ ಪಾದೋದಕ ಎಂದು ಸಾವಕಾಶವಾಗಿ ಉಚ್ಚರಿಸುತ್ತಿರಬೇಕು. ಆಮೇಲೆ ಬಲಗೈ ಬೆರಳುಗಳಿಂದ ಇಷ್ಟಲಿಂಗವನ್ನು ಎತ್ತಿ ಹಿಡಿದು ಎಡ ಅಂಗೈಯಲ್ಲಿ ಸಂಗ್ರಹವಾದ ಲಿಂಗಪಾದೋದಕವನ್ನು ಸ್ವೀಕರಿಸಬೇಕು. ಈ ಕ್ರಿಯೆಯನ್ನು ಗುರುಮುಖದಿಂದ ಅರಿತುಕೊಳ್ಳುವದು ಅನುಕೂಲಕರ.

ಪ್ರಸಾದಸ್ವೀಕಾರ :– ಪ್ರಸಾದ ಸ್ವೀಕರಿಸುವ ತಟ್ಟೆಯಲ್ಲಿ ಪದಾರ್ಥಗಳನ್ನು ಎಡೆಮಾಡಿದ ಮೇಲೆ ವಾಟೆಯಲ್ಲಿರುವ ಮಂತ್ರೋದಕವನ್ನು ಸ್ಪರ್ಶಿಸಿ ಲಿಂಗಯ್ಯನಿಗೆ ನೈವೇದ್ಯ ತೋರಿಸಿ

ಮೌನದಲುಂಬುದು ಆಚಾರವಲ್ಲ
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ ಶಿವ ಶರಣೆನ್ನುತ್ತಿರಬೇಕು
ಕರಣವೃತ್ತಿಗಳಡಗುವವು
ಕೂಡಲಸಂಗನ ನೆನೆವುತ್ತಲುಂಡರೆ
ಜಯ ಮಂಗಲಂ ಜಯಗುರು ಬಸವೇಶ ಹರ ಹರ ಮಹಾದೇವ.

ಎಂದು ಹೇಳಿ ಪ್ರಸಾದ ಸ್ವೀಕರಿಸಬೇಕು. ಪ್ರಸಾದ ಕೆಳಗೆ ಬೀಳದಂತೆ, ಕೇಡಾಗದಂತೆ ಎಚ್ಚರವಹಿಸಬೇಕು.

ಅನುಭಾವ

ಪ್ರಸಾದ ಸ್ವೀಕರಿಸಿದ ನಂತರ ಶಿವಾನುಭವ ಮಾಡಿದಾಗಲೆ ಇಷ್ಟಲಿಂಗೋಪಾಸನೆಯು ಪೂರ್ಣಗೊಳ್ಳುವುದು. ಶಿವಾನುಭವ ಎಂದರೆ ಶಿವಶರಣರು ಅರಿತು ಆಚರಿಸಿ ನುಡಿದ ವಚನಗಳ ಚಿಂತನೆ. ಕನಿಷ್ಟ ಒಂದಾದರೂ ವಚನ ಮತ್ತು ಅದರ ಭಾವಾರ್ಥವನ್ನು ಹೇಳಿ ಸಹಭೋಜನ ಮಾಡಿದವರೊಂದಿಗೆ ಅಥವಾ ಮನೆಯ ಸದಸ್ಯರೊಂದಿಗೆ ಚರ್ಚಿಸುವುದಕ್ಕೆ ಮತ್ತು ವಚನದ ಆಶಯದಂತೆ ನಮ್ಮ ನಡೆನುಡಿಗಳನ್ನು ರೂಢಿಸಿಕೊಳ್ಳಲು ಸಂಕಲ್ಪ ಮಾಡುವದಕ್ಕೆ ಶಿವಾನುಭವ ಅಥವಾ ಅನುಭಾವ ಎನ್ನುತ್ತಾರೆ. ಈ ರೀತಿ ಅನುಭಾವ ಮಾಡುವುದು ಪ್ರತಿಯೊಬ್ಬ ವೀರಶೈವನ ಆದ್ಯ ಕರ್ತವ್ಯ. ನಂತರ 'ಜಯಮಂಗಲಂ ಜಯಗುರುಬಸವೇಶ ಹರಹರ ಮಹಾದೇವ' ಎನ್ನುತ್ತ ಪೂರ್ಣಗೊಳಿಸಬೇಕು. ಇದುವೇ ವೀರಶೈವನ ಅರ್ಚನ, ಅರ್ಪಣ ಮತ್ತು ಅನುಭಾವಗಳ ಪರಿ. ಇದುವೇ ಇಷ್ಟಲಿಂಗೋಪಾಸನೆ.

ಅನುಬಂಧ ೧

ಜ್ಯೋತಿ ಬೆಳಗುತಿದೆ ವಿಮಲ
ಪರಂಜ್ಯೋತಿ ಬೆಳಗುತಿದೆ
ಮಾತುಮನಂಗಳಿಂದತ್ತತ್ತಮೀರಿದ
ಸಾತಿಶಯದ ನಿರುಪಾಧಿಕ ನಿರ್ಮಲ ॥ಪ॥

ಶಿವಧರ್ಮನಾಳ ವೆಂತೆಂಬ ಕಂಬದ ಮೇಲೆ
ಸುವಿವೇಕ ಹೃದಯಾಬ್ಜ ಪಣತೆಯೊಳು
ಸವೆಯದ ಸದ್ಭಕ್ತಿ ರಸ ತೈಲ ತೀವಿದ
ಪ್ರವಿಮಲಕಳೆಯೆಂಬ ಬತ್ತಿವಿಡಿದು ದಿವ್ಯ ॥೧॥

ಮುಸುಕಿದ ವಿಷಯ ಪತಂಗ ಬಿದ್ದುರುಳೆ ತಾ
ಮುಸಬುದ್ಧಿಯೆಂಬ ಕತ್ತಲೆಯಳಿಯೆ
ಮುಸಗಿ ಸುಜ್ಞಾನವೆಂತೆಂಬ ಮಹಾಪ್ರಭೆ
ಪಸರಿಸಿ ಮಾಯಾಕಾಳಿಕೆ ಪೋರ್ದದನುಪಮ ॥೨॥

ಪ್ರಣವಾಕಾರದ ಗುಣ ಮೂರು ಮುಟ್ಟದ
ಗಣನೆಗತೀತಾರ್ಥವನೆ ತೋರುವ
ಅಣುಮಾತ್ರ ಚಲನೆಯಿಲ್ಲದ ಮೋಕ್ಷಚಿಂತಾ
ಮಣಿಯೆನಿಸುವ ಶಂಭುಲಿಂಗವೆ ತಾನಾದ ॥೩॥

— ನಿಜಗುಣ ಶಿವಯೋಗಿ

(ಲಿಂಗ) ಜಯಮಂಗಲಮಯ ಶಿವಲಿಂಗ ॥ಪ॥
ಗುರುಕರಯೋಗ ದುರುರೂಪಾಂಚಿತ
ಪರಶಿವ ಭಕ್ತಸು ದೇಹಕೆ ಇಷ್ಟಲಿಂಗ ॥೧॥

ದಿನಕರ ಹಿಮಕರ ನ್ಯೂನ ಸಂಗತ ಜಾತ
ಮನಂಬುಜ ವಾಸ ಸುಕರನಿಷ್ಕಲ ಚಿಲ್ಲಿಂಗ ॥೨॥

ಭಾವಗಮ್ಯರೂಪ ದೇವಗೆ ಹರಪ್ರಭು
ಪಾವನ ಶಿವಯೋಗ ಮಂದಿರ ಭಾವ ॥೩॥

ಜಯಮಂಗಲ ಬಸವೇಶಾ ಜಯಮಂಗಲಭವನಾಶಾ
ಜಯ ಜಯ ಭಕ್ತರ ಕೋಶ ಜಯಮಂಗಲಬಸವೇಶಾ||ಪ||
ಭಕ್ತೋದ್ಧಾರಕ ಬಸವ ಮುಕ್ತಿಪ್ರದಾಯಕ ದೇವಾ
ಮುಕ್ತರ ಕೂಡಿಸೋಬೇಗ ಜಯಮಂಗಲ ಬಸವೇಶಾ||೧||
ಭವರೋಗ ವೈದ್ಯನೆ ಭವಮಾಲೆ ಹರಿದವನೆ
ತವಚರಣ ತೋರೆನಗೆ ಜಯಮಂಗಲ ಬಸವೇಶಾ||೨||
ನತ ಜನರ ಪೊರೆವಾತ ನುತಿಸುವೆ ನಾ ಮಮತಾತಾ
ಭೂತಲದೊಳು ಪ್ರಖ್ಯಾತ ಜಯಮಂಗಲ ಬಸವೇಶಾ ||೩||

ಜ್ಞಾನಪೂರ್ಣಂ ಜಗಂಜ್ಯೋತಿ ನಿರ್ಮಲವಾದ
ಮನವೆ ಕರ್ಪುರದಾರತಿ ||ಪ||
ಅನುದಿನ ಗುರುವಿನ ಅನುರಾಗಭಕ್ತಿಯಲಿ
ಜನನ ಮರಣ ರಹಿತ ಜಂಗಮಗೆ ಬೆಳಗಿರಿ ||ಅ.ಪ.||
ನಾನೀನೆಂಬುದ ಬಿಡಿರಿ, ನರಕವೆ ಪ್ರಾಪ್ತಿ।
ಜ್ಞಾನಿಗಳೊಡನಾಡಿರಿ।
ಹೀನ ವಿಷಯದ ಜನ್ಮ ಹಿಂದುಳಿಸಿ ಲಿಂಗಕ್ಕೆ
ದೇವ ನೀ ಗತಿ ಎಂದು ಮನವೆತ್ತಿ ಬೆಳಗಿರಿ||೧||
ಅಷ್ಟಾವರಣದ ಸ್ಥಲವು, ಮಾನವಜನ್ಮ
ಹುಟ್ಟಿ ಬರುವುದು ದುರ್ಲಭವು।
ಕೊಟ್ಟಾನೋ ಗುರು ಎಮಗೆ ಮಾಡಿದ ಫಲದಿಂದ
ಹುಟ್ಟಿದ ಮಗನ್ಹೆಸರು 'ಶಿವ'ನೆಂದು ಕರೆಯಿರಿ||೨||

ಅನುಬಂಧ ೨

ಎನ್ನ ಕರದೊಳಗಿರ್ದು ಏಕೆ ನುಡಿಯೆ?

ಎನ್ನ ಕರದೊಳಗಿರ್ದು
ಎನ್ನೊಳೇತಕೆ ನುಡಿಯೆ
ಎನ್ನ ಭವಭವದಲ್ಲಿ ಬಿಡದಾಳ್ದನೆ ॥ಪ॥

ಎನ್ನ ಚಿಂತಾಮಣಿಯೆ
ಎನ್ನ ಪರುಷದ ಕಣಿಯೆ
ಎನ್ನ ಬೇಡಿದುದೀವ ಸುರಭೂಜವೆ
ಎನ್ನ ಸಂಜೀವನವೆ
ಎನ್ನ ಪರಮಾಯುವೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೧॥

ಎನ್ನ ಗತಿಮತಿಯು ನೀ
ನೆನ್ನ ಚೈತನ್ಯವೇ
ಎನ್ನನಗಲದೆ ಕೂಡಿ ಬಿಡದಾಳ್ದನೇ
ಎನ್ನ ಇಹಪರ ಸುಖವೆ
ಎನ್ನ ಮುಕ್ತಿಯ ಸಿರಿಯೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೨॥

ಎನ್ನ ಭಾಗ್ಯದ ವಧುವೆ
ಎನ್ನ ಭಕ್ತಿಯ ನಿಧಿಯೆ
ಎನ್ನ ಮನವೆಂಬ ವನಿತೆಯ ತಿಲಕವೆ
ಎನ್ನ ಹೃದಯಾಲಯದ
ಚಿನ್ಮಯದ ಮೂರ್ತಿಯೇ
ಎನ್ನಕರದೊಳಗಿರ್ದು ಏಕೆ ನುಡಿಯೆ ॥೩॥

ಎನ್ನ ಮಾತೆಯು ನೀನೆ
ಎನ್ನ ತಾತನು ನೀನೆ
ಎನ್ನ ಬಂಧುವು ಬಳಗ ಸಖನು ನೀನೆ
ಎನ್ನ ಪತಿಯೂ ನೀನೆ

ಎನ್ನ ಹಿತನೂ ನೀನೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೪॥

ಎನ್ನ ಕುಲಗುರುವೇ ನೀ
ಎನ್ನ ವಿದ್ಯಾಗುರುವೆ
ಎನ್ನ ಭವಭವದಲ್ಲಿ ಬಿಡದ ಗುರುವೆ
ಎನ್ನ ದೀಕ್ಷಾ ಗುರುವೆ
ಎನ್ನ ಮೋಕ್ಷಗುರುವೆ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೫॥

ಎನ್ನ ಮನವನ ಚೈತ್ರ
ಎನ್ನ ಘನ ಸುಖ ಪಾತ್ರ
ಎನ್ನ ಭವವೆಂಬ ವಾರುಧಿಗೆ ಭೈತ್ರ
ಎನ್ನ ಜ್ಞಾನದ ನೇತ್ರ
ಎನ್ನ ಪುಣ್ಯದ ಗಾತ್ರ
ಎನ್ನ ಕರದೊಳಗಿರ್ದು ಏಕೆ ನುಡಿಯೆ ॥೬॥

ಎನ್ನ ನಿಲ್ಲಿಗೆ ತಂದು
ಭಿನ್ನವನು ಮಾಡಿದ್ಯೆ
ಅನ್ಯವೇ ನಾ ನಿನಗೆ ಹೇಳು ಗುರುವೇ
ಎನ್ನೊಡನೆ ನುಡಿಯದಿರೆ
ನಿನ್ನ ನಾ ಭವ ಭವದಿ
ಬೆನ್ನ ಬಿಡುವೆನೆ ಷಡಕ್ಷರಿ ಲಿಂಗವೆ ॥೭॥

– ಮುಪ್ಪಿನ ಷಡಕ್ಷರದೇವ

ಇನ್ನೆನಗೆ ಭಯವುಂಟೆ

ಎನ್ನ ಕಾಯವು ನಿನಗೆ
ಉನ್ನತಾಲಯವಾಯಿ
ತಿನ್ನೆನಗೆ ಭಯವುಂಟೆ ಎಲೆ ಲಿಂಗವೇ ॥ಪ॥

ಎನ್ನ ಕಾಲುಗಳೆರಡು
ಉನ್ನತದಕಂಭವೈ

ಎನ್ನ ಒಡಲೇ ನಿಮಗೆ ದೇವಾಲಯ
ಎನ್ನ ತೋಳುಗಳೆರಡು
ಉನ್ನತದ ಮದನಕ್ಕೆ
ಎನ್ನ ಶಿರ ಸೌವರ್ಣ ಕಲಶವಯ್ಯ ||೧||

ಎನ್ನ ಕಿವಿ ಕೀರ್ತಿಮುಖ
ಎನ್ನ ನಾಲಿಗೆ ಘಂಟೆ
ಎನ್ನ ನಯನಗಳೆರಡು ಜ್ಯೋತಿ ನಿಮಗೆ
ಎನ್ನ ಮುಖವೇ ದ್ವಾರ
ಎನ್ನ ದಂತವೆ ಆದಕೆ
ಮಿನ್ನುತಿಹ ಮೌಕ್ತಿಕದ ಸೂಸಕಗಳು ||೨||

ಎನ್ನಧರ ಜವಳಿಗದ
ಎನ್ನ ನಾಸಾಪುಟವು
ನನ್ನಿಯಂ ಸೌರಭ್ಯರಸಘಟಿತವು
ಚನ್ನಾಗಿ ಬೀಸುವ
ಹೊನ್ನ ಜಾಳೇಂದ್ರವ್ಮೆ
ಇನ್ನುಳ್ಳ ಉಪಕರಣವೆಂತೆಂದೆನೆ ||೩||

ಎನ್ನ ಸಮತೆಯೆ ಜಲವು
ಎನ್ನ ಸದ್ಗುಣ ಗಂಧ
ಎನ್ನ ನಿತ್ಯತ್ವವೇ ಅಕ್ಷತೆಗಳು
ಎನ್ನ ಜ್ಞಾನವೆ ಪುಷ್ಪ
ಎನ್ನ ಭಕ್ತಿಯೆ ಬೋನ
ಎನ್ನ ಮನವೇ ನಿಮಗೆ ಪೂಜಾರಿಯು ||೪||

ಇಂತಪ್ಪ ಪೂಜೆಯನು
ಸಂತಸದಿ ಕೈಕೊಳುತ
ಕಂತುಹರ ಶಿವಷಡಕ್ಷರಿ ಲಿಂಗವು
ಮುಂತೆ ಎನ್ನೊಳಗೆ ನಿ
ಶ್ಚಿಂತನಾಗಿರುತಿರಲು
ಚಿಂತೆಯುಂಟೇ ಹಲವು ಭವ ಭೀತಿಯ ||೫||

– ಮುಪ್ಪಿನ ಷಡಕ್ಷರದೇವ

ಅನುಬಂಧ ೩

ಇಷ್ಟಲಿಂಗದ ಸುತ್ತ.....

೧. ಸಣ್ಣ ಪಂಚಸೂತ್ರ ಲಿಂಗಕ್ಕೆ ವಿಶ್ವದಾಕಾರದ ಕಪ್ಪುಕಂತೆಯನ್ನು ತೊಡಿಸಿ ಸದ್ಗುರುವಿನಿಂದ ಅಂತರಂಗದ ಚಿತ್ಕಳೆಯನ್ನು ತುಂಬಿಸಿ ಇಷ್ಟಲಿಂಗವನ್ನಾಗಿಸಿದೆ.

೨. ವಿಶ್ವದಾಕಾರದಲ್ಲಿ ದೇವರನ್ನು (ಇಷ್ಟಲಿಂಗ) ಪೂಜಿಸುವ ನಿಜ ವೀರಶೈವರು (ಶರಣರು) ಸಕಲಜೀವಾತ್ಮರಿಗೆ ಲೇಸನೆಬಯಸುವ ವಿಶ್ವಕುಟುಂಬಿಗಳು.

೩. ಕಪ್ಪು ಬಣ್ಣದ ಕಂತೆಯಿಂದ ನಿರ್ಮಿತ ಇಷ್ಟಲಿಂಗವು ಯೋಗಸಾಧನೆಗೆ ಅತ್ಯುಪಯುಕ್ತ.

೪. ಇಷ್ಟಲಿಂಗ ಬರಿ ತತ್ವದ ವಸ್ತುವಲ್ಲ ತ್ರಾಟಕಯೋಗ (ದೃಷ್ಟಿಯೋಗ) ಸಾಧನೆಗೆ ಅನುವಾಗುವ ಯೋಗಿಕ ಕುರುಹು.

೫. ಇಷ್ಟಲಿಂಗದ ಕಪ್ಪು ಕಂತೆಯಲ್ಲಿ ಪ್ರತಿಫಲಿತವಾಗುವ ಬೆಳಕಿನ ಕಳೆಯಮೇಲೆ ದೃಷ್ಟಿ ನಿಲ್ಲಿಸುವುದು ಬಹುಫಲದಾಯಕ.

೬. ಮೋಕ್ಷ ಸಂಪಾದನೆಯ ಮಾರ್ಗವು ಸರ್ವಮಾನವರ ಹಕ್ಕು ಎಂಬ ಧಾರ್ಮಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿದ ತತ್ವವೇ ಇಷ್ಟಲಿಂಗ ತತ್ವ.

೭. ದೇಹವನ್ನೆ ದೇವಾಲಯವಾಗಿಸಿ ಸಾಮಾಜಿಕ ಸ್ವಾತಂತ್ರ್ಯವನ್ನು ಕಾರ್ಯರೂಪಕ್ಕೆ ತರಲು ಅನುವು ಮಾಡಿಕೊಟ್ಟ ಸಾಧನ ಇಷ್ಟಲಿಂಗ.

೮. ಪೂಜಾರಿಗಳ ಕಪಿಮುಷ್ಟಿಯಿಂದ ಪಾರಾಗಿ ನೇರವಾಗಿ ದೇವರನ್ನು ಪೂಜಿಸಲು ಸಹಕಾರಿಯಾದುದು ಇಷ್ಟಲಿಂಗ.

೯. ಬಹುದೇವತೋಪಾಸನೆಯನ್ನು ವಿರೋಧಿಸಿ ಏಕದೇವೋಪಾಸನೆಯನ್ನು ಆಚರಣೆಗೆ ತಂದ ವೈಚಾರಿಕ ಹಾಗು ತಾತ್ವಿಕ ಕುರುಹು ಇಷ್ಟಲಿಂಗ.

೧೦. ಇಷ್ಟಲಿಂಗವನ್ನು ಪೂಜಿಸಿದವರ ಅನಿಷ್ಟಗಳು ಪರಿಹಾರಗೊಳ್ಳುವವು.

ಅರ್ಚನೆ ಅಂದರೆ

೧. ಧೂಪ, ದೀಪ, ಪತ್ರಿ ಪುಷ್ಪಾದಿಗಳನ್ನು ಉಪಾಸ್ಯವಸ್ತುವಿಗೆ ಕೈಯಾರೆ ಅರ್ಪಿಸುವುದು.

೨. ಸಚ್ಚಿದಾನಂದ ಸ್ವರೂಪಿ ಪರಮಾತ್ಮನನ್ನು ಜೀವಾತ್ಮನು ಆರಾಧಿಸುವದು.

೩. ಜನನ–ಮರಣ, ಸುಖ–ದುಃಖಗಳ ದ್ವಂದ್ವದಿಂದ ಮುಕ್ತವಾಗುವುದಕ್ಕೆ ದೈವೀಕಾರುಣ್ಯವನ್ನು ಪಡೆಯುವ ಕ್ರಿಯೆ.

೪. ಸರ್ವವನ್ನು ನಮಗೆ ದಯಪಾಲಿಸಿದ ಸರ್ವಶಕ್ತನಾದ ಪರಮಾತ್ಮನಿಗೆ ಒಂದು ಬಗೆಯ ಕೃತಜ್ಞತಾ ಸಮರ್ಪಣೆ.

ಲಿಂ. ಹಾನಗಲ್ಲ ಕುಮಾರಸ್ವಾಮಿಗಳು

- ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ
ತಪ್ಪುವವು ಅಪಮೃತ್ಯು, ಕಾಲಕರ್ಮಂಗಳಯ್ಯ
ದೇವಪೂಜೆಯ ಮಾಟ, ದುರಿತ ಬಂಧನದೋಟ
ಶಂಭು ನಿಮ್ಮಯ ನೋಟ, ಹಿಂಗದ ಕಣ್ಬೇಟ
ಸದಾ ಸನ್ನಿಹಿತನಾಗಿ ಶರಣೆಂಬುದು, ನಂಬುವುದು
ಜಂಗಮಾರ್ಚನೆಯ ಮಾಟ, ಕೂಡಲ ಸಂಗನ ಕೂಟ.

- ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ
ಹೊತ್ತು ಹೋದಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೋಗದ ಮುನ್ನ, ಮೃತ್ಯು ಮುಟ್ಟದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವನ

ಮುದ್ರಣ : ಯಾರಬಲ್ ಆಫಸೆಟ್ ಪ್ರಿಂಟರ್ಸ್, ಬೆಳಗಾವಿ.